# ಅನುಕ್ರಮಣಿಕೆ


**ಅನುವಾದದೊಂದಿಗೆ ಸ್ತೋತ್ರ** ....................................................... 1

**ಮಂಗಲಾಚರಣಮ್** ....................................................... 7

1. **ಪ್ರಸ್ತಾವನೆ** ....................................................... 9

**1.1** ಶ್ರೀ ಶ್ರೀ ಆಚಾರ್ಯಪಾದರು ಶ್ರೀ ದಕ್ಷಿಣಾಮೂರ್ತಿಯ ಅವತಾರ ಸ್ವರೂಪರು ....................................................... **10**

**1.2.** ದಕ್ಷಿಣಾಮೂರ್ತಿ ಎಂಬ ಶಬ್ದದ ಭಾವ ....................................................... **11**

**1.3.** ಪ್ರಣಾಮಸೂಚಕವಾದ-ನಮಃ-ಎಂಬ ಚರಣಪಲ್ಲವಿಯು ಏಕಾತ್ಮತೆಯನ್ನು ಬೋಧಿಸುತ್ತದೆ. ....................................................... **13**

**1.4** ನವವಿಧ ಭಕ್ತಿ. ಅದರ ಮೂರು ಭಾವ-ಪ್ರಕಾರಗಳು ....................................................... **14**

**1.5.** ಪರಾಭಕ್ತಿ ಮತ್ತು ಜ್ಞಾನನಿಷ್ಠೆ ಇವು ಭಿನ್ನವಲ್ಲವೆಂಬುದು ಸ್ಪಷ್ಟ. ....................................................... **20**

**1.6.** 'ಶ್ರೀಗುರು' ಎಂಬ ಶಾಬ್ದಿಕ ಸಂಜ್ಞೆ ....................................................... **23**

**1.7** ಈಶ್ವರ ಗುರು ಆತ್ಮ ಎಲ್ಲವೂ ಒಂದೇ! ....................................................... **25**

**1.8.** ಈ ಸ್ತೋತ್ರವು ವೇದಾಂತ ಶಾಸ್ತ್ರದ ಪ್ರಕರಣಗ್ರಂಥವಾಗಿದೆ – ಅನುಬಂಧ ಚತುಷ್ಟಯ ....................................................... **35**

**1.9.** ದಕ್ಷಿಣಾಮೂರ್ತಿ ಸ್ತೋತ್ರದ ಗರ್ಭಿತಾರ್ಥ: ಬ್ರಹ್ಮಸೂತ್ರಗಳ ಮಾದರಿಯಲ್ಲಿ **35**

**1.10.** ವಿಚಾರಾತ್ಮಕ ಸಾಧನ-ಶ್ರವಣ ಮನನ, ನಿದಿಧ್ಯಾಸನ. ....................................................... **43**

**1.11** ಮುಖ್ಯಾಧಿಕಾರಿ-ಸ್ತೋತ್ರ-ವಿಚಾರಾತ್ಮಕ ....................................................... **49**

**1.12.** ಮಂದಾಧಿಕಾರಿ.--ಉಪಾಸನ--ಷಟ್‌ತ್ರಿಂಶತ್ [ಮೂವತ್ತಾರು] ತತ್ತ್ವ. ........ **58**

**1.13.** ಈ ಸ್ತೋತ್ರದಲ್ಲಿಯ ವಿಚಾರಗಳು.--ಅಂತರ್ದೃಷ್ಟಿ. ....................................................... **71**

**1.14** ಇದಮ್ ಮತ್ತು ಅಹಮ್-ಅಪರೋಕ್ಷ ಜ್ಞಾನ. ....................................................... **75**

**2.** ಶ್ರೀ ಗುರು-ಶ್ರೀ ದಕ್ಷಿಣಾಮೂರ್ತಿ- ಸಾಕ್ಷಾತ್ಕಾರ- ಅದ್ವಯಪ್ರತ್ಯಗಾತ್ಮಾ. **78**

**2.1.** ದೃಷ್ಟಿಸೃಷ್ಟಿವಾದ ....................................................... **79**

| | | |
|---|---|---|
| **2.2.** | 'ಅದ್ವಯಮ್'........................................................ | **82** |
| **2.3.** | 'ದರ್ಪಣದೃಶ್ಯಮಾನನಗರೀ' ................................................ | **82** |
| **2.4.** | ಸ್ವಪ್ನದ ಉದಾಹರಣೆ- ಮಾಯಾ................................................ | **85** |
| **2.5** | ಜೀವ ಮತ್ತು ಈಶ್ವರ........................................................ | **88** |
| **2.6.** | ಅವಿದ್ಯಾ ಹಾಗೂ ಮಾಯಾ. .................................................... | **96** |
| **2.7** | ಸತ್ಯತ್ವ-ಅದರ ವ್ಯಾವಹಾರಿಕ ಹಾಗೂ ಪಾರಮಾರ್ಥಿಕ ಮುಖ-ಮಜಲುಗಳು | **99** |
| **2.8** | ಮೊದಲನೆಯ ಶ್ಲೋಕವು ಮಹಾವಾಕ್ಯದ ಕರ್ತವ್ಯವನ್ನು ನಿರ್ವಹಿಸುತ್ತದೆ.. | **100** |
| **2.9** | ಅಧ್ಯಾಸ ಎಂದರೆ ಭ್ರಮಾತ್ಮಕ ತಾದಾತ್ಮ್ಯ........................................ | **101** |
| **2.10** | ಮೊದಲನೆಯ ಶ್ಲೋಕ-ವೇದಾಂತದ ಸಾರಸಂಗ್ರಹ ............................ | **103** |
| 3. | **ಈ ಸ್ತೋತ್ರದ ಮೊದಲನೆಯ ಶ್ಲೋಕ ಹಾಗೂ ಇತರ ಶ್ಲೋಕಗಳು**. ....... | 105 |
| **3.1** | ಆತ್ಮ, ಬ್ರಹ್ಮ ಹಾಗೂ ಜ್ಞಾನವನ್ನು ಕುರಿತಂತೆ ಇರುವ ಮಿಶ್ರಿತ ದೃಷ್ಟಿಕೋನಗಳು......................................................................... | **105** |
| **3.2** | ವಿಚಾರಮಾರ್ಗವು ಮಾತ್ರ ತಾರಕ. ಆಚಾರ್ಯಪಾದ ಶ್ರೀ ಶಂಕರರ ಅಭಿವಚನ................................................................................. | **113** |
| **3.3** | ಇತರ ಸಿದ್ಧಾಂತಗಳು ಅನುಸರಿಸುವ ಪ್ರಮಾಣಗಳು ಹಾಗೂ ಪ್ರಮೇಯ ಪದಾರ್ಥಗಳು........................................................................... | **113** |
| **3.4** | ವೇದಾಂತಿಗಳ ಮತ. ..................................................................... | **116** |
| **3.4.1** | ಜಡಪದಾರ್ಥದಿಂದ ವಿಶ್ವವು ಜನಿಸಿತೆಂಬ ವಾದದ ನಿರಾಕರಣೆ............. | **116** |
| **3.4.2** | ಈಶ್ವರನು ಕೇವಲ ನಿಮಿತ್ತಕಾರಣ ಮಾತ್ರ ಎಂಬ ಸಿದ್ಧಾಂತದ ಖಂಡನೆ... | **119** |
| **3.4.3.** | ವ್ಯವಹಾರ ಹಾಗೂ ಪರಮಾರ್ಥಗಳ ಮಧ್ಯದ ವ್ಯತ್ಯಾಸವು ಅನಿವಾರ್ಯ. | **121** |
| **3.4.4.** | ಸತ್ಯತ್ವವು ಸ್ವಯಂಪ್ರಮಾಣಕವಾಗಿದೆ. .............................................. | **122** |
| **3.4.5.** | 'ಜ್ಞಾತ' ದಿಂದ 'ಅಜ್ಞಾತ'ದ ಕಡೆಗೆ...................................................... | **123** |
| **3.4.6** | ಸೃಷ್ಟಿಯು ಕೇವಲ ಕಲ್ಪನೆ ಮಾತ್ರ; ಅಜಾತಿವಾದದ ಅನಿವಾರ್ಯತೆ........ | **125** |
| **3.4.7** | ತನ್ನದೇ ಆದ ಇರುವಿಕೆ ................................................................. | **129** |

3.4.8 ಪ್ರಮಾಣ ಪ್ರಮೇಯ ವ್ಯವಹಾರವೆಲ್ಲವೂ ಅವಿದ್ಯೆಯ ರಾಜ್ಯದಲ್ಲಿ............129
3.4.9 ವಿಷಯ - ವಿಷಯಿ ........................................................131
3.4.10 ಸಾಕ್ಷಿ - ಉಪನಿಷತ್ತುಗಳಲ್ಲಿ ಮಾತ್ರ ನಿರ್ದೇಶ ..............................132
3.4.11 ಶ್ರುತಿ ಹಾಗೂ ಇತರ ಪ್ರಮಾಣಗಳು..............................................136
3.5 ಕಾರ್ಯಕಾರಣಭಾವವನ್ನು ಕುರಿತಂತೆ ವೇದಾಂತದ ದೃಷ್ಟಿ..................137
3.5.1 ಕಾರ್ಯ ಉಪಾದಾನಕ್ಕಿಂತ ಬೇರೆಯಲ್ಲ.........................................137
3.5.2 ಉಪಾದಾನ ಕಾರಣ ಎಂದರೇನು ? ..............................................140
3.5.3 ಸತ್ತಾ ಮಾತ್ರ ಉಪಾದಾನಕಾರಣ.................................................141
3.5.4 ಕಾರ್ಯದ ಸ್ವರೂಪ : ವೇದಾಂತದ ಸತ್ಕಾರ್ಯವಾದ .........................144
3.6 ಸೃಷ್ಟಿಯ ವಿಶ್ಲೇಷಣೆ ...................................................................146
3.6.1 ಸೃಷ್ಟಿ - ಒಂದು ಅಧ್ಯಾರೋಪ......................................................146
3.6.2 ಪ್ರಕ್ರಿಯೆ ಎಂದರೆ ಪ್ರತಿಕಲ್ಪನೆ .....................................................148
3.6.3 ಬ್ರಹ್ಮನನ್ನು ತಪ್ಪಾಗಿ ಜಗತ್ತೆಂದು ನೋಡುವುದು................................150
3.6.4 ಸೃಷ್ಟಿ ಪ್ರಕ್ರಿಯೆ - ಈಶ್ವರ ಅಭಿನ್ನ ನಿಮಿತ್ತೋಪಾದಾನಕಾರಣ................151
3.6.5 ಮಾಯಾ, ಈಶ್ವರನ ಶಕ್ತಿ...........................................................152
3.6.6 ಸೃಷ್ಟಿ – ಅಧಿಷ್ಠಾನವಾದ ಬ್ರಹ್ಮದ ತಟಸ್ಥ ಲಕ್ಷಣ...............................155
3.6.7 ಪರಿವರ್ತನೆ - ಒಂದು ಮಿಥ್ಯಾವಿಚಾರ .........................................157
3.7 ಸೃಷ್ಟಿ, ಸ್ಥಿತಿ, ಲಯ, ಪ್ರವೇಶ, ನಿಯಮನ ಎಂಬ ಐದು ಅರ್ಥವಾದಗಳು ...159
3.7.1 ವಾಸ್ತವದಲ್ಲಿ ಮಾಯೆಯೂ ಇಲ್ಲ, ವಿಶ್ವವೂ ಇಲ್ಲ..................................159
3.7.2 ಲಯ.........................................................................................159
3.7.3 ಕ್ರಮಸೃಷ್ಟಿ, ಯುಗಪತ್ ಸೃಷ್ಟಿ.......................................................160
3.7.4 ಎಲ್ಲ ಉಪನಿಷತ್ತುಗಳ ತಾತ್ಪರ್ಯ ಸರ್ವಜ್ಞನಾದ ಬ್ರಹ್ಮ. ಸೃಷ್ಟಿ ಇತ್ಯಾದಿಗಳಲ್ಲ .................................................................161
3.7.5 ತರ್ಕವೊಂದೇ ಸಾಲದು...............................................................163

3.7.6 ಸೃಷ್ಟಿ ಇತ್ಯಾದಿ ಒಂದು ಮಿಥ್ಯಾಕಲ್ಪನೆ ........................................ 164

4. ಎಂಟನೆಯ ನುಡಿ - ಶ್ರೀಗುರುವು ಎಲ್ಲ ಕಲ್ಪನೆಗಳಿಗೂ ಪ್ರಕ್ರಿಯೆಗಳಿಗೂ ಅತೀತನು 174

4.1.1 ಭೇದ, ಸಂಬಂಧ, ಇತ್ಯಾದಿ - ಮಿಥ್ಯಾ ಕಲ್ಪನೆಗಳು ........................... 168

4.1.2 ಜೀವರಲ್ಲದೆ, ಬ್ರಹ್ಮವು ಕೂಡ ಭ್ರಮೆಗೊಳಗಾದಂತೆ ತೋರುತ್ತದೆ ........... 170

4.1.3 ಭ್ರಮೆಗೊಳಗಾಗದವರಿಗೆ ಭೇದ ಇತ್ಯಾದಿಗಳು ಬರಿ ಶಬ್ದಗಳು................ 170

4.2 ಪ್ರಕ್ರಿಯೆಗಳ ಗುರಿ ತಾದಾತ್ಮ್ಯದಲ್ಲಿ ಕೊನೆಗೊಳ್ಳುವ ಭಾವಗಳ ಶುದ್ಧೀಕರಣ 172

4.2.1 ಕಾರ್ಯಕಾರಣಭಾವ ......................................................... 172

4.2.2 ಸ್ವಸ್ವಾಮಿಭಾವ ............................................................. 173

4.2.3 ಪಿತೃಪುತ್ರ ಭಾವ ............................................................ 175

4.2.4 ಬೇರೆ ಭಾವಗಳು - ಭೋಕ್ತೃಭೋಗ್ಯಭಾವ, ಸಖ್ಯಭಾವ ಇತ್ಯಾದಿ............ 176

4.2.5 ಶ್ರುತಿಯ ವಿಧಾನ ............................................................. 183

4.2.6 ಶಿಷ್ಯಾಚಾರ್ಯ ಸಂಬಂಧ - 'ಅಸತ್'ನಿಂದ 'ಸತ್' ದ ಜ್ಞಾನ .................. 187

4.2.7 ಗುರಿ ಸಾಧಿಸುವವರೆಗೂ ಶಿಷ್ಯಾಚಾರ್ಯ ಸಂಬಂಧವನ್ನು ಉಳಿಸಿಕೊಳ್ಳಲಾಗುತ್ತದೆ ............................................. 190

4.3.1 ಎಂಟನೆಯ ನುಡಿ ಮೊದಲಿನ ಏಳರ ಉಪಸಂಹಾರ ............................ 192

4.3.2 ವಿಷಯದ ಗಹನತೆಯ ದೃಷ್ಟಿಯಿಂದ ಪುನರುಕ್ತಿಯು ಸಮರ್ಥನೀಯ ....... 193

4.4. ಮಾಯೆ - ಅನಿರ್ವಚನೀಯ ................................................... 196

4.4.1 ಸರ್ವ ವ್ಯವಹಾರಗಳಿಗೂ ಮಾಯೆ ಅಥವಾ ಅವಿದ್ಯೆ ಹೊಣೆಗಾರ............ 196

4.4.2 ಮಾಯೆಯ ಅಸ್ತಿತ್ವ ವ್ಯವಹಾರಕ್ಕೆ ಸೀಮಿತ ...................................... 197

4.4.3 ಉಪಾದಾನಕಾರಣವಾದ ಮಾಯೆಯ ಅದ್ಭುತ ಪ್ರದರ್ಶನ..................... 200

4.4.4 ಮಾಯೆ ವಿಚಾರವನ್ನು ತಾಳಲಾರದು ; ಅದು ಸಾಕ್ಷಿವೇದ್ಯ, ಭಾವರೂಪವಾದದ್ದು ........................................................ 202

4.4.5 ಅವಿದ್ಯೆಯ ಆಶ್ರಯಸ್ಥಾನ ಹಾಗೂ ವಿಷಯ .................................... 207

4.4.6 ಮಾಯೆಯ ಆವರಣಶಕ್ತಿ ಹಾಗೂ ವಿಕ್ಷೇಪಶಕ್ತಿ.................................. 208

4.4.7 ‘ಅಹಂ’ ಮತ್ತು ‘ಇದಂ’ಗಳಿಗೆ ಸಂಬಂಧಿಸಿದಂತೆ ಅಸತ್ ಸಾಕ್ಷಾತ್ಕರಣಗಳ ಸರಣಿ ........ 210
4.4.8 ವಾಸ್ತವದಲ್ಲಿ ಮಾಯೆ ಎಂಬುದಿಲ್ಲ ; ಇರುವುದು ಬ್ರಹ್ಮವೊಂದೇ........ 211
4.4.9 ಮಾಯೆಯ ವಿಚಾರ ಒಂದು ಪ್ರತಿಕಲ್ಪನೆ........ 212
4.4.10 ತ್ರಿಸತ್ತಾವಾದ, ದ್ವಿಸತ್ತಾವಾದ, ಏಕಸತ್ತಾವಾದ ........ 212
4.4.11 ಮಾಯೆಯ ವಿಕ್ಷೇಪಶಕ್ತಿಯಾಗಿ ಮನಸ್ಸು ........ 215
4.5 **ಭ್ರಮೆ ಹಾಗೂ ಸ್ವಪ್ನಾವಸ್ಥೆ** ........ 219
4.5.1 ಸ್ವಪ್ನ ಜಗತ್ತು ಭ್ರಮಾತ್ಮಕ ........ 219
4.5.2 ಸ್ವಪ್ನ ಮತ್ತು ಜಾಗ್ರತ್ ಒಂದರಿಂದೊಂದು ವಿಶಿಷ್ಟವಾದ ಅವಸ್ಥೆಗಳಲ್ಲ - ಅವು ಅವಳಿ-ಜವಳಿಗಳಿದ್ದಂತೆ........ 222
4.6.1 ಸೃಷ್ಟಿದೃಷ್ಟಿವಾದ........ 230
4.6.2 ಈಶ್ವರನ ಸ್ಥಾನ........ 231
4.6.3 ವ್ಯಾವಹಾರಿಕಸತ್ತೆಯನ್ನು ಬಿಟ್ಟುಕೊಡುವುದು ........ 233
4.7.1 ಪ್ರಮಾಣಗಳ ಪ್ರಮಾಣತ್ವ ಪ್ರಶ್ನಾರ್ಹ ........ 234
4.7.2 ‘ಪ್ರಮಾಣ’ಗಳು ಸತ್ತನ್ನು ಮಾತ್ರ ತೋರಬಲ್ಲವು ........ 234
4.8 ಪ್ರತ್ಯಭಿಜ್ಞೆ ಸತ್ತನ್ನು ಮಾತ್ರ ತೋರುತ್ತದೆ........ 236
4.9 ‘ಸಾಮಾನ್ಯ ಜಗತ್ತು’, ಪ್ರತಿಕರ್ಮವ್ಯವಸ್ಥೆ ........ 238
4.10 (A) ವೈದಿಕ ವಿಧಿಗಳು (B) ಆಕಾಶದ ನಿತ್ಯತ್ವ ಮುಂತಾದವುಗಳ ಗತಿ...... 239
4.11 ದೃಷ್ಟಿ ಸಮಸಮಯಾ ಸೃಷ್ಟಿ........ 240
4.12 ಅವಿದ್ಯೆ ಏಕವೋ ಅನೇಕವೋ ? ........ 243
4.13 ಮೂಲಾವಿದ್ಯೆ ಇತ್ಯಾದಿಗಳ ಅನಾದಿತ್ವ ಕಲ್ಪಿತವಾದದ್ದು........ 245
4.14.1 ಜೀವ, ಈಶ್ವರ, ವಿಶ್ವ, ಬಂಧ, ಮುಕ್ತಿ - ಇವೆಲ್ಲವೂ ಅವಿದ್ಯೆಯ ಕಾರಣದಿಂದ ಬಂದ ಕಲ್ಪನೆಗಳು........ 246

**4.14.2** ಆತ್ಮನು ಉಪಹಿತ ಅಥವಾ ಅನುಪಹಿತ - ಸಾಪೇಕ್ಷ ಹಾಗೂ ನಿರಪೇಕ್ಷ ನಿಲುವುಗಳಿಂದ ....................**254**
**4.14.3** ಸರ್ವಜ್ಞತ್ವ ....................**256**
**4.14.4** ಅಜ್ಞಾತದ ಅನುಭವ ....................**260**
**4.14.5** ಸಜೀವಜೀವವಾದುದು ಒಂದೇ ....................**262**
**4.14.6** 'ಮಿಥ್ಯಾ' ಶ್ರುತಿಯಿಂದ ಸತ್ಯಜ್ಞಾನ ....................**267**
**4.14.7** ಗುರೂಪದೇಶ ಹಾಗೂ ಸಾಕ್ಷಾತ್ಕಾರ ಅಸಂಭವವಲ್ಲ ....................**271**
**4.14.8** ಮಹಾವಾಕ್ಯದ 'ತತ್' ದ ಅರ್ಥ ....................**273**
**4.14.9** ದೃಷ್ಟಿಸೃಷ್ಟಿವಾದದ ಸ್ವಾರಸ್ಯದ ವಿಸ್ತಾರ - ದೃಷ್ಟಿರೇವಸೃಷ್ಟಿಃ ....................**276**
**4.14.10** ಇದು ಛದ್ಮವೇಷದಲ್ಲಿರುವ ಬೌದ್ಧಮತವಲ್ಲ. ....................**284**
**4.14.11** ಸ್ವಪ್ನ ಸಾದೃಶ್ಯ ಎಲ್ಲ ಸಂಶಯಗಳನ್ನೂ ಪರಿಹರಿಸುತ್ತದೆ ....................**286**
**4.14.12** ಜಗತ್ತೆನ್ನುವುದು ಅಸ್ತಿತ್ವದಲ್ಲಿಲ್ಲ - ನ ಕಿಂಚನ ....................**289**
**4.14.13** ಜೀವತ್ವ ಅಸ್ತಿತ್ವದಲ್ಲಿಲ್ಲ ....................**292**
**4.14.14** ಆತ್ಮನೊಬ್ಬನೆ 'ಇದ್ದಾನೆ' ....................**293**
**4.14.15** ಅಪವಾದ ದೃಷ್ಟಿ ....................**297**
**5. ಎರಡನೆಯ ನುಡಿ** .................... 304
5.1 ಸಾಕ್ಷಾತ್ಕಾರದ ವರೆಗೆ ವಿಚಾರ ....................**304**
5.2.1 ವಿಶ್ವದ ಸೃಷ್ಟಿ – ಅನುಮಾನ ಅಥವಾ ಅರ್ಥಾಪತ್ತಿಗಳೇ ಅನಿವಾರ್ಯ ....................**304**
5.2.2 ಪರಮಾಣು ವಾದ ....................**305**
5.2.3 ಸಾಂಖ್ಯವಾದ ....................**307**
5.2.4 ಬೇರೆ ವಾದಗಳು ....................**308**
5.2.5 ಈ ವಾದಗಳ ಖಂಡನೆ ....................**310**
5.2.6 ಸೃಷ್ಟಿಯು ವಾದಗಳಿಗೆ ಸಿಗುವುದಿಲ್ಲ, ಶ್ರುತಿಯೊಂದೇ ಪ್ರಮಾಣ ....................**314**

5.2.7 ‘ಸೃಷ್ಟಿ’ ಕುರಿತು ಶ್ರುತಿ - ಬ್ರಹ್ಮ - ಆತ್ಮ, ಉಪಾದಾನ ಹಾಗೂ ನಿಮಿತ್ತ ಕಾರಣ........................................316

5.3.1 ಬೀಜ - ಅಂಕುರ ನಿದರ್ಶನ........................................322

5.3.2 ಬ್ರಹ್ಮವು ಅಖಂಡ, - ಸತ್ ಒಂದೇ ಉಪಾದಾನ ಕಾರಣ....................327

5.4.1 ಮಾಯಾ - ವಿವರ್ತವಾದ - ದೋಷಮುಕ್ತ........................................331

5.4.2 ಮಾಯಾ ಪ್ರಮೇಯ ಅನಿವಾರ್ಯ - ಶ್ರುತಿ, ಅನುಭವ, ಯುಕ್ತಿ.............333

5.4.3 ನಾಮ ರೂಪಗಳ ಜಗತ್ತು - ದೇಶ, ಕಾಲ, ನಿಮಿತ್ತ..............................336

5.4.4 ಅನ್ಯ ಪ್ರತಿರೋಧಗಳಿಗೆ ಉತ್ತರ........................................337

5.4.5 ಈಶ್ವರ ಮಾಯಾವಿ, ಸರ್ವಜ್ಞ ಹಾಗೂ ಸರ್ವಶಕ್ತ...............................338

5.4.6 ಪರಮಾಣುವಾದ, ಪರಿಣಾಮವಾದ ಇತ್ಯಾದಿಗಳನ್ನು ವೇದಾಂತಪ್ರಕ್ರಿಯೆಯಲ್ಲಿ ಅಪವಾದಗಳೆಂದು ಸ್ವೀಕಾರ.......................342

5.4.7 ಎಲ್ಲ ಪ್ರಕ್ರಿಯೆಗಳಂತೆ ವೇದಾಂತ ಪ್ರಕ್ರಿಯೆಗೂ ಬಾಧೆ ಸಾಧ್ಯ ..............345

5.5.1 ವಿವಿಧ ಪ್ರಸ್ಥಾನಗಳಲ್ಲಿ ‘ದೇಶ’........................................347

5.5.2 ವೇದಾಂತದ ದೃಷ್ಟಿಯಲ್ಲಿ ದೇಶ........................................349

5.5.3 ಸಾಕ್ಷಿಯಿಂದ ಮಾತ್ರ ಆಕಾಶದ ದರ್ಶನ ಬರುತ್ತದೆ ............................350

5.5.4 ಭೂತಾಕಾಶ, ಅವ್ಯಾಕೃತಾಕಾಶ, ಚಿದಾಕಾಶ....................................351

5.5.5 ನೈಜನೆಲೆ-ಚಿದಾಕಾಶ ........................................352

5.5.6 ‘ಇಹ’ ಅನುಭವ - ಪ್ರತ್ಯಗಾತ್ಮನಿಗೆ ಹೆಬ್ಬಾಗಿಲು ...............................352

5.5.7 ಆಕಾಶ ಒಂದು ಕಾರ್ಯ - ಅಂತವುಳ್ಳದ್ದು. .......................................355

5.5.8 ಆಕಾಶದ ಶೋಧದ ಮುಕ್ತಾಯ ನಿರಾಕಾಶನಾದ ಬ್ರಹ್ಮದಲ್ಲಿ................356

5.6 ಕಾಲ ........................................358

5.6.1 ಕಾಲದ ಪ್ರವಾಹ........................................358

5.6.2 ವಿವಿಧ ಪಂಥಗಳಲ್ಲಿ ‘ಕಾಲ’ ........................................360

5.6.3 ಕಾಲವನ್ನು ಕುರಿತಂತೆ ವೇದಾಂತದ ಅಭಿಪ್ರಾಯ..............................361

5.6.4 ಸಾಕ್ಷಿಯಿಂದ ಅನಾವೃತವಾದ ಕಾಲ ................................................**363**
5.6.5 ಕಾಲ ಅವಿದ್ಯೆಯ ಕಾರ್ಯ ........................................................**364**
5.6.6 ಅವಿದ್ಯೆಯಾಗಿ ಕಾಲ...............................................................**365**
5.6.7 ಅವಿದ್ಯೆ, ಹಾಗೂ ಬ್ರಹ್ಮದ ನಡುವಿನ ಸಂಬಂಧವಾಗಿ ಕಾಲ..................**365**
5.6.8 ಈಶ್ವರನ ಕ್ರಿಯಾಶಕ್ತಿಯಾಗಿ ಕಾಲ ..............................................**367**
5.6.9 ಬ್ರಹ್ಮದ ತಟಸ್ಥ ಲಕ್ಷಣವಾಗಿ ಕಾಲದ ಅನಂತತೆ ................................**368**
5.6.10 ಅನಂತತೆಯತ್ತ ಸಾಗುವ ಕಾಲ ....................................................**371**
5.6.11 'ಪ್ರತ್ಯಕ್ಷ ಕ್ಷಣ' (ವರ್ತಮಾನ)ದ ಅನುಭವ, ಶಾಶ್ವತ 'ಸದ್ಯ'ದ ಕ್ಷಣಿಕ ಕಲ್ಪನೆ**374**
5.7 ದೇಶ ಮತ್ತು ಕಾಲಗಳಲ್ಲಿ ಸ್ಥಿತವಾದ 'ವಸ್ತು'ಗಳು ...............................**377**
5.7.1 'ಮಡಕೆ' ಕೂಡ ವ್ಯಾಖ್ಯಾನಕ್ಕೆ (ವಿವರಣೆಗೆ) ಸಿಗುವುದಿಲ್ಲ. ಜಗತ್ತಿನ ವಿವರಣೆ ಇದಕ್ಕೂ ಹೆಚ್ಚು (ಕಠಿಣ)........................................................... 391
5.7.2 'ನಾನು ಆತ್ಮನನ್ನು ತಿಳಿದಿದ್ದೇನೆ', 'ನಾನು ಮಡಿಕೆಯನ್ನು ತಿಳಿದಿದ್ದೇನೆ' ಇವುಗಳ ವಿಶ್ಲೇಷಣೆ : ...........................................................393
5.7.3 ಚಿತ್ರದ ಸಾದೃಶ್ಯ - ವಿಶ್ವ, ಪ್ರಜ್ಞೆ ಹಾಗೂ ಜಡ - ಅಧಿಷ್ಠಾನವಾದ ಬ್ರಹ್ಮ-ಆತ್ಮದಿಂದ ಬೇರೆಯಲ್ಲ ....................................................... 396
5.7.4 ಜಗತ್-ಚಿತ್ರದ ವೈಚಿತ್ರ್ಯಗಳು ....................................................401
5.7.5 ಮಾಯೆಯೆಂದರೆ ಅಜ್ಞಾತನೆಂದು ತಿಳಿದಿರುವ ಆತ್ಮ ........................ 403
5.7.6 ಪ್ರಕ್ರಿಯೆಗಾಗಿ ಮಾಯಾ ಎಂಬ ಆಧಾರ ಊಹೆ ..............................404
5.7.7 ಅಪವಾದ ದೃಷ್ಟಿ - ಅತ್ಯಧಿಕ ಪ್ರಶ್ನೆಗಳಿಂದ ಬಿಡುಗಡೆ....................... 405
5.7.8 ಸೃಷ್ಟಿ ಒಂದು ವಿಕಲ್ಪ - ಕಾಲದಲ್ಲಿ ನಡೆದ ಘಟನೆಯಲ್ಲ.....................406
5.7.9 'ಸರ್ಗ' ಎಂದರೆ 'ಬ್ರಹ್ಮ' ; 'ಬ್ರಹ್ಮ' ಎಂದರೆ 'ಸರ್ಗ' ...........................409
5.8.1 ಮಾಯಾವಿ ಮತ್ತು ಯೋಗಿಗಳ ನಿದರ್ಶನಗಳು ................................**396**
5.8.2 ಸಹಾಯಕ ಸಾಧನಗಳು ಅನವಶ್ಯಕ ; ಈಶ್ವರ ಇಚ್ಛಾಮಾತ್ರವಾಗಿ ಸೃಷ್ಟಿಸುತ್ತಾನೆ.........................................................................**397**

5.8.3 ಈಶ್ವರನ ಮೇಲೆ ಮಾಯೆಯ ಪ್ರಭಾವವಿಲ್ಲ ........................................401
5.8.4 ಈಶ್ವರನನ್ನು ಕುರಿತ ಬೇರೆ ಎಲ್ಲ ಅಭಿಪ್ರಾಯಗಳಿಗೂ ಸ್ಥಾನ ಕಲ್ಪಿಸಲಾಗಿದೆ403
5.8.5 'ಈಶ್ವರನು' ಚಿತ್ ಎಂಬ ದೃಷ್ಟಿ ಸಾಪೇಕ್ಷದೃಷ್ಟಿ ಮಾತ್ರ........................406
5.9 ಎರಡನೇ ನುಡಿಯ ತಾತ್ಪರ್ಯ - ವಾಸ್ತವ ಜಗತ್ತಿನ ನಿರಾಕರಣೆ...........409
6. ಮೂರನೆಯ ನುಡಿ........................................................................ 431
6.1 ಸ್ಫುರಣಮ್ ಸದಾತ್ಮಕಮ್ ........................................................416
6.1.2 ವಸ್ತುಗಳ ಅಸ್ತಿತ್ವ ಮತ್ತು ಸ್ಫುರಣ ಇವುಗಳನ್ನು ಕುರಿತ ಪ್ರಶ್ನೆಗಳು - ಅವುಗಳಿಗೆ ಉತ್ತರ ........................................................417
6.1.3 ಸಾಕ್ಷಿ ಅನುಭವದ ವಿಶ್ಲೇಷಣೆಯು ಅಪವಾದ ದೃಷ್ಟಿಗೆ ದಾರಿಯಾಗುತ್ತದೆ...421
6.1.4 ಸೃಷ್ಟಿ, ಸ್ಥಿತಿ ಹಾಗೂ ಲಯಗಳ ವಿಚಾರ.............................................423
6.1.5 ಬ್ರಹ್ಮದ ತಟಸ್ಥ ಲಕ್ಷಣ ...........................................................426
6.1.6 ಬ್ರಹ್ಮ - ಸ್ವರೂಪಲಕ್ಷಣ...........................................................428
6.1.7 ಸತ್ಯಂ ಜ್ಞಾನಂ ಅನಂತಂ ಇತ್ಯಾದಿ - ಇವುಗಳಲ್ಲಿ ಪ್ರತಿಯೊಂದೂ ವ್ಯಾಖ್ಯೆಯೋ ಅಥವಾ ಮೂರೂ ಒಟ್ಟಾಗಿಯೋ ? ................................430
6.1.8 ಆತ್ಮವು ಲಕ್ಷಣಾತೀತ ; ಧರ್ಮಧರ್ಮಿಭಾವವು ಕಲ್ಪಿತ..........................437
6.1.9 ವ್ಯಾಖ್ಯೆ - ಅಖಂಡಾರ್ಥ ............................................................439
6.2.1 ಪ್ರತ್ಯಗಾತ್ಮನ್ - ತಟಸ್ಥ ಲಕ್ಷಣ ....................................................440
6.2.2 ಪಂಚಕೋಶಗಳು ........................................................................440
6.2.3 ಪ್ರತ್ಯಗಾತ್ಮನ್ - ಪಂಚಕೋಶಗಳಲ್ಲಿ ನಿಹಿತವಾದ ಬ್ರಹ್ಮ .....................443
6.2.4 ಪ್ರತ್ಯಗಾತ್ಮನ್ - ಸ್ವರೂಪಲಕ್ಷಣ ....................................................446
6.2.5 ಸತ್, ಚಿತ್, ಆನಂದ - ಬ್ರಹ್ಮ ಹಾಗೂ ಪ್ರತ್ಯಗಾತ್ಮದ ಸ್ವರೂಪಲಕ್ಷಣ.......447
6.2.6 ಪ್ರತ್ಯಗಾತ್ಮ ಹಾಗೂ ಬ್ರಹ್ಮ - ತಟಸ್ಥಲಕ್ಷಣ ಮತ್ತು ಸ್ವರೂಪಲಕ್ಷಣ : ಸರಿಯಾದ ಅರ್ಥ ......................................................................448
6.3.1 ಜೀವ ಮತ್ತು ಈಶ್ವರರನ್ನು ಕುರಿತ ಬೇರೆ ಬೇರೆ ಪ್ರಕ್ರಿಯೆಗಳು ................453

6.3.2 ಚಿದಾಭಾಸ - ಆಭಾಸವಾದ, ಪ್ರತಿಬಿಂಬವಾದ, ಅವಚ್ಛೇದವಾದ, ದೃಷ್ಟಿ-ಸೃಷ್ಟಿವಾದ ....453
6.3.3 ಮಹಾವಾಕ್ಯದಲ್ಲಿರುವ ಶಬ್ದಗಳ ಸೂಚಿತಾರ್ಥ ....462
6.3.4 ಸ್ಫುರಣಂ ಸದಾತ್ಮಕಂ - ಆತ್ಮದ 'ಅನುಭವ' ....464
6.4.1 ಶ್ರೀಗುರುವಿನ ಪಾದಗಳಡಿಯಲ್ಲಿ ವಿಚಾರ ಅತ್ಯಗತ್ಯ ....466
6.4.2 ಶ್ರೀಗುರು - ಮಹಾವಾಕ್ಯಾರ್ಥದ ಅಧಿಕೃತ ರೂಪ ....469
6.4.3 ಪರಮಕಾರುಣ್ಯವೊಂದೇ ತಾರಕವು ....471
6.4.4 ಸಂಪೂರ್ಣ ಶರಣಾಗತಿ ಅತ್ಯಾವಶ್ಯಕ ....472
6.5.1 ಸಾಕ್ಷಾತ್ ಬೋಧನ ....479
6.5.2 ವಾಕ್ ....480
6.5.3 ವಾಕ್ ನ ನಾಲ್ಕು ಪಾದಗಳು - ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ; ನಾದ, ಬಿಂದು ....482
6.5.4 ವಾಕ್, ಬ್ರಹ್ಮವೇ ....484
6.5.5 ವೇದವಾಕ್ ....485
6.5.6 ವೇದಗಳ ಶಾಶ್ವತತೆ - ಅಪೌರುಷೇಯತೆ ....487
6.5.7 ವೇದ - ಬ್ರಹ್ಮದ ವಿವರ್ತ ; 'ಚಿತ್' ರೂಪದ ಪ್ರಾಮುಖ್ಯತೆ : ಎಲ್ಲ ಶಾಸ್ತ್ರಗಳ ಆಧಾರ ....490
6.5.8 ವೇದ - ಮನೋವೃತ್ತಿಗಳಿಂದ ಸೀಮಿತವಾದ ಚೈತನ್ಯ ....494
6.5.9 ಮೂಲಾರ್ಥದಲ್ಲಿ ವೇದದ ನಿತ್ಯತ್ವ ....499
6.5.10 ವೇದವು - ಅನಂತ, ನಿತ್ಯ, ಸ್ವತಃಪ್ರಮಾಣ - ಸಾಕ್ಷಾತ್ ಚೈತನ್ಯ ....501
6.5.11 ವೇದಗಳ ಬಗೆಗಿನ ಕಲ್ಪನಾತಿರೇಕ ಪ್ರಮೇಯಗಳ ಖಂಡನೆ ....502
6.5.12 ವೇದದ ಪ್ರಯತ್ನ - ಬ್ರಹ್ಮಾತ್ಮ ಸಾಕ್ಷಾತ್ಕಾರ ....504
6.5.13 ವೇದವು ಬ್ರಹ್ಮವಿದ್ಯೆ, ಉಪನಿಷತ್, ಮಹಾವಾಕ್ಯ ....506
6.6.1 ಮಹಾವಾಕ್ಯ - ಗುರುವಿನಿಂದ ನೇರ ಬೋಧನೆ ....510

6.6.2 ಉತ್ತಮಾಧಿಕಾರಿ - ಶ್ರವಣದಿಂದ ಸಾಕ್ಷಾತ್ಕಾರ ....................................512
6.6.3 ಏಕತೆಯ ಸಂಭಾವ್ಯತೆ - ಮಹಾವಾಕ್ಯವೊಂದೇ ಪ್ರಮಾಣ ....................513
6.6.4 ನಾನಾ ರೀತಿಯ ಸಾಧಕರು - ಅವಿದ್ಯೆಯ ಭಿನ್ನ ಭಿನ್ನ ಆಯಾಮಗಳು - ಉಪದೇಶದ ಪುನರುಕ್ತಿ ..................................................................515
6.6.5 ಮಹಾವಾಕ್ಯದಲ್ಲಿರುವ ಶಬ್ದಗಳ ಅರ್ಥ - ಅಗತ್ಯವಾದ ಪೀಠಿಕೆ ...............517
6.6.6 ಮಹಾವಾಕ್ಯ - ಶಬ್ದಗಳು ಮತ್ತು ಅರ್ಥಗಳು - ಸರ್ವನಾಮ ಏಕತ್ವದ ಸಂಜ್ಞೆ519
6.6.7 ಇದಲ್ಲದ ಬೇರೆ ಅರ್ಥಗಳ ಅಸಮರ್ಥನೀಯತೆ ..................................520
6.6.8 ಎಲ್ಲ ಭ್ರಮಾತ್ಮಕ ಕಲ್ಪನೆಗಳ ನಿರಸನ ಹಾಗೂ ತಾದಾತ್ಮ್ಯದ ಸಾಧನೆ - ಉಪನಿಷತ್ತುಗಳ ಏಕಮೇವ ಉದ್ದೇಶ ...............................................526
6.6.9 ಪ್ರವೇಶಶ್ರುತಿಯ ಅರ್ಥ, ಐಕ್ಯ..........................................................529
6.6.10 ಐಕ್ಯ, ತಾತ್ಪರ್ಯಲಿಂಗಗಳಿಂದ ನಿರ್ಣೀತವಾದಂತೆ .............................531
6.6.11 ಶ್ರುತಿಗಳು ಮತ್ತು ಸೂತ್ರಗಳು ಭೇದವನ್ನು ಉಗ್ರವಾಗಿ ಖಂಡಿಸುತ್ತವೆ......532
6.6.12 ವಾಕ್ಯವ್ಯಾಖ್ಯಾನಸೂತ್ರ - ತಾತ್ಪರ್ಯನಿರ್ಣಯದ ಪ್ರಕ್ರಿಯೆ...................534
6.6.13 ತತ್ತ್ವಮಸಿ ಮಹಾವಾಕ್ಯದ ವ್ಯಾಖ್ಯಾನಗಳು - ಭಾಗತ್ಯಾಗ ಲಕ್ಷಣ ...........536
6.6.14 ಮಹಾವಾಕ್ಯದ ವ್ಯಾಖ್ಯಾನ - ಜಹಲ್ಲಕ್ಷಣ ...........................................545
6.6.15 ಅನ್ಯೋನ್ಯರೀತಿಯಿಂದ ದೃಢೀಕರಣ - ಅಖಂಡ ಬ್ರಹ್ಮ-ಆತ್ಮ.................546
6.6.16 ಬ್ರಹ್ಮಾತ್ಮ ಅನುಭವದ ವಸ್ತುವಲ್ಲ ; ಅನುಭವವೇ................................549
6.6.17 ಬ್ರಹ್ಮ-ಆತ್ಮ ಸಾಕ್ಷಾತ್ಕಾರದಲ್ಲಿ ಕೊನೆಗೊಳ್ಳುವ ಪ್ರಕ್ರಿಯೆ......................551
6.6.18 ಮಹಾವಾಕ್ಯವು ಇಲ್ಲಿ, ಈಗಲೇ ಪ್ರತ್ಯಕ್ಷ ಜ್ಞಾನವನ್ನು ಕೊಡುತ್ತದೆ .............551
6.6.19 ಪರೋಕ್ಷಜ್ಞಾನದಿಂದ ಅಸತ್ತ್ವಾಪಾದಕಾವರಣದ ನಿರ್ಮೂಲನ - 'ಬ್ರಹ್ಮ ಇದೆ' 557
6.7.1 ತಾದಾತ್ಮ್ಯತೆ ಸ್ವಯಂಸಿದ್ಧ ; ಯಾವ ಸ್ಥಿತಿಯನ್ನೂ ಅವಲಂಬಿಸಿಲ್ಲ...........559
6.7.2 ತಾದಾತ್ಮ್ಯತೆ, 'ಏಕತೆ', ಸ್ವರೂಪವೇ ; ಸಂಖ್ಯಾಕ್ರಮವಲ್ಲ .....................560
6.7.3 ವ್ಯವಹಾರದಲ್ಲಿ ಏಕತೆಯ ಸ್ಥಾನ ಸ್ವರೂಪ ; ವಿಶಿಷ್ಟತೆ ತೋರಿಕೆಯದು.....561

6.7.4 ‘ಅಜ್ಞೇಯ’ನಾದ ಬ್ರಹ್ಮವನ್ನು ‘ತಿಳಿಯುವುದು’ ಅನಾದಿಯಾದ ಅವಿದ್ಯೆಯ ನಾಶ........568
6.7.5 ಅಧ್ಯಾರೋಪ ಹಾಗೂ ಅಪವಾದ ಪದ್ಧತಿಯಿಂದ ಪೂರ್ಣಾನುಭವ........574
6.7.6 ಇದು ವೃತ್ತಿವ್ಯಾಪ್ತಿ, ಫಲವ್ಯಾಪ್ತಿಯಲ್ಲ........575
6.7.7 ಪ್ರಮಾಣವಾದ ಮಹಾವಾಕ್ಯವು ಅವಿದ್ಯೆಯನ್ನು ನಾಶಮಾಡುತ್ತದೆ ಅಷ್ಟೇ. ಬ್ರಹ್ಮವು ಸ್ವಯಂಸಿದ್ಧ........580
6.7.8 ಅಖಂಡಾಕಾರ ವೃತ್ತಿ ಅಗತ್ಯವಾದುದು........581
6.7.9 ಅವಿದ್ಯೆಯ ಅಭದ್ರ ಅಸ್ತಿತ್ವ ; ಆದರೂ ಅದರ ಧಾರ್ಷ್ಟ್ಯ........582
6.7.10 ಅವಿದ್ಯೆಗೆ ಅಸ್ತಿತ್ವವಿಲ್ಲ ; ಆದರೂ ಮುಕ್ತವಾದದ್ದನ್ನು ‘ಮುಕ್ತ’ಗೊಳಿಸಲು ಶಾಸ್ತ್ರಗಳು ಅವಶ್ಯ........582
6.7.11 ಅಖಂಡಾಕಾರವೃತ್ತಿ ತನ್ನಲ್ಲಿರುವ ಮಿಥ್ಯಾ ಅಯಾಮವನ್ನು ನಾಶಗೊಳಿಸುತ್ತದೆ........585
6.8.1 ವಿದ್ಯಾ ಮತ್ತು ಅವಿದ್ಯಾ - ವಿದ್ಯೆಯೊಂದೇ ಮೋಕ್ಷದ ಸಾಧನ........585
6.8.2 ಮೋಕ್ಷವನ್ನು ಕುರಿತ ಬೇರೆ ವಾದಗಳು. ಅವುಗಳ ಖಂಡನ........587
6.8.3 ಮೋಕ್ಷವು ಕರ್ಮಫಲವಲ್ಲ........589
6.8.4 ಮೋಕ್ಷ ಉಪಾಸನೆಯ ಫಲವಲ್ಲ........591
6.8.5 ಪ್ರಪಂಚವಿಲಯವಾದದ ಖಂಡನೆ........592
6.8.6 ಕಾಮವಿಲಯನವಾದದ ಖಂಡನೆ........592
6.8.7 ಮೋಕ್ಷ, ವಾಸನಾ ನಿರೋಧ ಅಥವಾ ಮನೋನಿರೋಧದ ಫಲವಲ್ಲ........593
6.8.8 ಪ್ರಸಂಖ್ಯಾನವಾದದ ಖಂಡನೆ........596
6.8.9 ಜ್ಞಾನಕರ್ಮಸಮುಚ್ಚಯವಾದದ ಖಂಡನ........597
6.8.10 ಜ್ಞಾನವು ತನ್ನ ಫಲವನ್ನು, ಎಂದರೆ ಮೋಕ್ಷವನ್ನು, ಸ್ವತಂತ್ರವಾಗಿ ತಾನೇ ಸಾಧಿಸುತ್ತದೆ........597

6.9.1 ಬ್ರಹ್ಮಜ್ಞಾನವು ವಿಧಿಗಳಿಗೆ ಅಧೀನವಲ್ಲ ; ಕರ್ಮ, ಜ್ಞಾನಗಳ ವಿಪರೀತ ಲಕ್ಷಣಗಳು ........ 599

6.9.2 ಕರ್ಮದ ನಾಲ್ಕು ಫಲಗಳು - ಸೃಷ್ಟಿ, ವಿಕಾರ, ಸಿದ್ಧಿ, ಶುದ್ಧಿ; ಮೋಕ್ಷ ಇದು ಯಾವುದೂ ಅಲ್ಲ........ 602

6.9.3 ಜ್ಞಾನದ ವಿಷಯದಲ್ಲಿ ವಿಧಿಗಳು ಪರಿಣಾಮಕಾರಿಯಾಗಲಾರವು. ವಿಧಿಯ ಛಾಯೆಯುಳ್ಳ ಶ್ರುತಿವಾಕ್ಯಗಳು, ಅವುಗಳ ಉದ್ದೇಶ........ 604

6.9.4 ಶಾಸ್ತ್ರವು ನಿರ್ದೇಶನವನ್ನಾಗಲಿ ಪ್ರತಿಬಂಧವನ್ನಾಗಲಿ ಮಾಡುವುದಿಲ್ಲ. ಅದು ಪ್ರಮಾಣವೆಂದು (ಸತ್ಯವನ್ನು) ತೋರಿಸುತ್ತದೆ ಮಾತ್ರ ........ 605

6.9.5 ಬ್ರಹ್ಮವಿದ್ಯೆಯ ಫಲ - ಬ್ರಹ್ಮದಲ್ಲಿ ಸ್ಥಿತವಾಗಿರುವುದು; ಕ್ರಿಯೆಗಳಿಗೆ ಕೊನೆ ..609

6.10.1 ಜ್ಞಾನನಿಷ್ಠಾ........ 612

6.10.2 ಶಮ, ದಮ, ಸಂನ್ಯಾಸಗಳಂಥ ಸಾಧನಗಳ ಮೂಲ ಸ್ವರೂಪದಲ್ಲಿದೆ..... 613

6.10.3 ಕರ್ಮ ಮತ್ತು ಜ್ಞಾನಗಳ ಅಧಿಕಾರಿಗಳು - ಅಂತರದ ಪುನರುಚ್ಚಾರ........ 614

6.10.4 ಎಲ್ಲ ಮನುಷ್ಯರು ಹಾಗೂ ದೇವ, ದೇವತೆಗಳು ಜ್ಞಾನಕ್ಕೆ ಅರ್ಹರು........ 617

6.11.1 ಕರ್ಮವು ಜ್ಞಾನದ ಪೀಠಿಕೆ........ 618

6.11.2 ಸ್ವಧರ್ಮ........ 620

6.11.3 ಸಾಕ್ಷಾತ್ಕಾರವನ್ನು ಸಾಧಿಸುವ ಇಚ್ಛೆ ........ 622

6.11.4 ಆತ್ಮಜ್ಞಾನದಲ್ಲಿ ರುಚಿ........ 623

6.11.5 ವಿಧ್ಯುಕ್ತ ಕರ್ಮಗಳಿಂದ ಮನಸ್ಸಿನ ಶುದ್ಧೀಕರಣ ........ 624

6.11.6 ಉಪಾಸನೆಯಿಂದ ಏಕಾಗ್ರತೆ........ 627

6.11.7 ಮೋಕ್ಷದ ಸಾಧನ - ಕರ್ಮ, ಬಾಹ್ಯ ; ಸಂನ್ಯಾಸ - ಆಂತರಿಕ........ 630

6.11.8 ಜ್ಞಾನಕಾಂಡಕ್ಕೆ ಕರ್ಮಕಾಂಡದ ಸಂಬಂಧ........ 631

6.11.9 ಹಂತ ಹಂತವಾಗಿ ವಿಘ್ನಗಳನ್ನು ಪರಿಹರಿಸುವ ಪ್ರಕ್ರಿಯೆ........ 633

6.11.10 ಜ್ಞಾನನಿಷ್ಠೆ ಸಾಧ್ಯ........ 635

**6.11.11** ಜ್ಞಾನನಿಷ್ಠಾ, ಸಾಧನಾಭಕ್ತಿ ; ಪರಜ್ಞಾನನಿಷ್ಠಾ, ಸಾಧ್ಯಭಕ್ತಿ ಅಥವಾ ಪರಾಭಕ್ತಿ - ಪರಾಕಾಷ್ಠತೆಯ ಸ್ಥಿತಿ ........ **637**

**6.12.1** ಬ್ರಹ್ಮವಿದ್ಯಾ - ಸರ್ವವಿದ್ಯಾ ಪ್ರತಿಷ್ಠಾ........ **638**

**6.12.2** ಎಲ್ಲ ಕ್ರಿಯೆ, ಭಾವನೆಗಳ ಮೂಲ ಬ್ರಹ್ಮವಾಸನಾ........ **639**

**6.12.3** ಎಲ್ಲ ಶಾಸ್ತ್ರಗಳ ಏಕಮೇವ ತಾತ್ಪರ್ಯ - ಬ್ರಹ್ಮವಿದ್ಯೆ ........ **642**

**6.12.4** ಬೇರೆ ಶಾಸ್ತ್ರಗಳು - ಶ್ರುತಿಯ ವಿಸ್ತರಣ ........ **643**

**6.12.5** ವೇದಾಂತ - ಬೇರೆ ಪ್ರಸ್ಥಾನಗಳಿಗೂ ಸ್ಥಾನ ಕಲ್ಪಿಸುವ ಉದಾರತೆ........ **646**

**6.12.6** ಬೇರೆ ಪ್ರಸ್ಥಾನಗಳು - ಬ್ರಹ್ಮವಿದ್ಯೆಯ ಸೂಚಕಗಳು ........ **649**

**6.12.7** ಅಧಿಕಾರಭೇದದಿಂದಾಗಿ ಬೇರೆ ಬೇರೆ ಪ್ರತಿಪಾದನೆಗಳು ಪ್ರತಿಯೊಂದರಲ್ಲಿಯೂ ಬ್ರಹ್ಮವಿದ್ಯೆಗೆ ಕರೆದೊಯ್ಯುವ ಗುಪ್ತಮಾರ್ಗಗಳು ಇದ್ದೇ ಇರುತ್ತವೆ ........ **660**

**6.12.8** ಬೇರೆ ವ್ಯವಸ್ಥೆಗಳ ಖಂಡನೆಯ ಅಗತ್ಯ........ **663**

**6.12.9** ಸಾಂಖ್ಯ ಹಾಗೂ ಯೋಗಗಳಿಗೆ ವಿಶೇಷ ಲಕ್ಷ್ಯ ಕೊಡಲಾಗಿದೆ, ಯಾಕೆ ?... **664**

**6.12.10** ವೇದಾಂತಕ್ಕೆ ಸಾಂಖ್ಯ ಮತ್ತು ಯೋಗಗಳ ನಿಕಟ ಸಾಮೀಪ್ಯ ; ಅವಶ್ಯ ಭೂಮಿಕೆಯನ್ನು ಸಿದ್ಧ ಪಡಿಸುವುದು ಅವುಗಳ ಉದ್ದೇಶ........ **666**

**6.12.11** ನ್ಯಾಯ - ವೈಶೇಷಿಕ, ಸಾಧಕನಿಗೆ ಮೊದಲನೆಯ ಮೆಟ್ಟಿಲು........ **669**

**6.12.12** ಪೂರ್ವಮೀಮಾಂಸಾ - ವೇದಾಂತದೊಡನಿರುವ ಹೊಂದಾಣಿಕೆ........ **670**

**6.12.13** ಉಪಾಸನೆ ಹಾಗೂ ಆರಾಧನೆ - ಸವಿಶೇಷ, ನಿರ್ವಿಶೇಷ - ಹಾಗೂ ಅವುಗಳ ತಾತ್ಪರ್ಯ ........ **673**

**6.13.1** ಭಾಗವತಧರ್ಮ - ವೈದಿಕ, ಅವೈದಿಕ ಇಂಥ ಎಲ್ಲ ಪ್ರಕ್ರಿಯೆಗಳಿಗೂ ಸ್ಥಾನ, ಸ್ಮೃತಿ ಹಾಗೂ ತರ್ಕ ಶ್ರುತಿಗೆ ಅಧೀನ ........ **679**

**6.13.2** ದ್ವೈತ ವೇದಾಂತ ಪ್ರಸ್ಥಾನಗಳು ........ **681**

**6.13.3** ಬೌದ್ಧ ಸಿದ್ಧಾಂತ - ವಿಜ್ಞಾನವಾದ........ **683**

**6.13.4** ಬೌದ್ಧ ಮತ - ಶೂನ್ಯವಾದ........ **685**

6.13.5 ಜೈನ ಮತ.......................................................................687

6.13.6 ಸೂಫೀ ಮತ .......................................................................688

6.13.7 ಕ್ರೈಸ್ತಧರ್ಮ.......................................................................688

6.13.8 ಚಾರ್ವಾಕಮತ.......................................................................689

6.13.9 ಆಧುನಿಕ ಭೌತಶಾಸ್ತ್ರ.......................................................................689

6.13.10 ಸಾಧಕನನ್ನು ಸ್ವರೂಪದಲ್ಲಿ ಸ್ಥಿರಗೊಳಿಸುವುದು - ಎಲ್ಲ ಶಾಸ್ತ್ರಗಳ ಪ್ರಯತ್ನ691

6.13.11 ಆಂಶಿಕ ದೃಷ್ಟಿಗಳಿಂದುಂಟಾದ ವಾದಗಳಿಗೆ ವೇದಾಂತದಿಂದ ಪರಿಹಾರ, ನಿವೃತ್ತಿಯ ಪ್ರಾಧಾನ್ಯ.......................................................................693

6.13.12 ವೇದಾಂತಕ್ಕೆ ತರ್ಕ ಸಹಾಯಕ : ಸಮನ್ವಯ, ಅವಿರೋಧಗಳ ಹುಟ್ಟು ಸ್ವರೂಪದಲ್ಲಿ.......................................................................696

6.13.13 ಅವೈದಿಕ ಮತಗಳ ಪರಸ್ಪರ ಸಂಘರ್ಷ : ಅದ್ವೈತ ಯಾವುದನ್ನೂ ವಿರೋಧಿಸುವುದಿಲ್ಲ.......................................................................699

6.13.14 ಮೋಕ್ಷ - ಕೇವಲ ಔಪನಿಷದಿಕ ಸಮ್ಯಗ್ಜ್ಞಾನದ ಫಲ .......................................................................701

6.14.1 ಮಹಾವಾಕ್ಯ ಅಂತಿಮ ಪ್ರಮಾಣ. ಅದರ ನಂತರ ಯಾವ ಆಕಾಂಕ್ಷೆಯೂ ಇಲ್ಲ.......................................................................702

6.14.2 ಆತ್ಮದ ಪ್ರಕಾಶ : ಪ್ರಕಾಶಿತವಲ್ಲ ; ಸರ್ವಸಮ್ಮತ ಮೂಲ ಅನುಭವ........704

6.14.3 ಅನುಭವ, ಅಜ್ಞಾನ ಹಾಗೂ ಜ್ಞಾನದಿಂದ ಅದರ ನಿರ್ಮೂಲನ : ಮೂಲದಲ್ಲಿ ಎಲ್ಲ ಪಂಥಗಳಿಂದಲೂ ಸ್ವೀಕೃತ .......................................................................706

6.14.4 ವೇದ ಮತತತ್ತ್ವವಲ್ಲ, ಪ್ರಮಾಣ - ಅಮಾನ್ಯತೆ ಅಸಂಭವ....................708

6.14.5 ವೇದವೆಂಬ ಪದ.......................................................................709

6.14.6 ವೇದ ಎಂದೂ ವೇದ್ಯವಲ್ಲ.......................................................................709

6.14.7 ಬ್ರಹ್ಮಸಾಕ್ಷಾತ್ಕಾರದ ನಂತರ ಜ್ಞೇಯವಾಗುವುದು ಯಾವುದೂ ಇಲ್ಲ. ಅವಿದ್ಯೆ ಅಸ್ತಿತ್ವದಲ್ಲಿರಲಿಲ್ಲ, ಈಗ ಇಲ್ಲ, ಮುಂದೆಯೂ ಇರುವುದಿಲ್ಲ .....................712

6.14.8 ಮಹಾವಾಕ್ಯ, ಅಧ್ಯಾರೋಪದ ಅಳಿವು .......................................................................714

6.15.1 ಶ್ರೀಗುರುವಿನ ಚರಣಗಳಲ್ಲಿ ಸಂಪೂರ್ಣ ಶರಣಾಗತಿ ............................716
6.15.2 ಗುರುವಿನ ಉಪದೇಶದ ಮಾಹಾತ್ಮ್ಯೆ ............................717
6.15.3 ಬಾಧೆಗಳ ಪರಿಹಾರ - ಸಾಕ್ಷಾತ್ಕಾರ ............................717
6.16.1 ಮೋಕ್ಷ, ಸಾಕ್ಷಾತ್ಕಾರದೊಂದಿಗೆ ಫಲಪ್ರಾಪ್ತಿ ............................720
6.16.2 ಮುಕ್ತರಿಗೆ ಸಂಸಾರಕ್ಕೆ ಮರಳುವಿಕೆಯಿಲ್ಲ ............................723
6.16.3 ಕೈವಲ್ಯವೇ ಪರಮಪುರುಷಾರ್ಥ ; ಎಲ್ಲ ಸಾಧನೆಗಳ ಪರಾಕಾಷ್ಠತೆ .........727
6.16.4 ಎಲ್ಲ ಸಾಧನೆಗಳ ಪರಾಕಾಷ್ಠತೆ ............................729
6.16.5 ಸರ್ವಜ್ಞಾನದ ಪರಾಕಾಷ್ಠತೆ ............................730
6.16.6 ಸುಖದ ಪರಾಕಾಷ್ಠತೆ ............................732
6.16.7 ಜ್ಞಾನಿ - ದೈವಾನುಗ್ರಹಪ್ರಾಪ್ತನು, ಪೂಜ್ಯನು ............................732
6.16.8 ಜ್ಞಾನಿ, ಅಶರೀರನು ............................733
6.16.9 ಸದ್ಯೋಮುಕ್ತಿ ............................734
6.16.10 ಜೀವನ್ಮುಕ್ತಿಯ ಅನುಭವ ............................735
6.16.11 ಆವರಣದ ನಾಶ - ಬಾಧಿತಾನುವೃತ್ತಿ, ಬ್ರಹ್ಮವಿತ್ ಪರಂಪರೆ ............................738
6.16.12 ಬ್ರಹ್ಮವಿತ್, ಬ್ರಹ್ಮವಿದ್ವರ, ಬ್ರಹ್ಮವಿದ್ ವರೀಯಾನ್, ಬ್ರಹ್ಮವಿದ್ವರಿಷ್ಠ .......739
6.16.13 ಸಪ್ತಭೂಮಿಕೆಗಳು : ಯೋಗದ ಏಳು ಹಂತಗಳು ............................739
6.16.14 ಪ್ರಾರಬ್ಧ - ಪಾರಮಾರ್ಥಿಕ, ಸಾಪೇಕ್ಷ ದೃಷ್ಟಿಗಳು ............................742
6.16.15 ಬ್ರಹ್ಮಸಾಕ್ಷಾತ್ಕಾರದ ಭಿನ್ನ ಭಿನ್ನ ಅಭಿವ್ಯಕ್ತಿಗಳು ............................746
6.16.16 ಜ್ಞಾನಿಯ ವ್ಯವಹಾರ ............................748
6.16.17 ಜ್ಞಾನಿಯ 'ಕ್ರಿಯೆಗಳು' ಆತ್ಮಪ್ರಬೋಧಕ್ಕಾಗಿ ............................751
6.16.18 ಸರ್ವಾತ್ಮ ಭಾವ : ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗುತ್ತಾನೆ...........753
6.16.19 ನಿರುಪಮನಾದ ಜ್ಞಾನದಾತಾ ಶ್ರೀಗುರುವಿಗೆ ಶಿಷ್ಯನ ಕೃತಜ್ಞತಾಪೂರ್ಣ ನಮಸ್ಕಾರಗಳು ............................756

॥श्रीः॥

# ಶ್ರೀದಕ್ಷಿಣಾಮೂರ್ತಿಸ್ತೋತ್ರ

## ಮಾನಸೋಲ್ಲಾಸ ಮತ್ತು ತತ್ತ್ವಸುಧಾ ವ್ಯಾಖ್ಯಾನಗಳ ಆಧಾರದ ಮೇಲೆ ಒಂದು ಅಧ್ಯಯನ

## ಅನುವಾದದೊಂದಿಗೆ ಸ್ತೋತ್ರ

विश्वं दर्पणदृश्यमाननगरीतुल्यं निजान्तर्गतं ।
पश्यन्नात्मनि मायया बहिरिवोद्भूतं यथा निद्रया ॥
यः साक्षात्कुरुते प्रबोधसमये स्वात्मानमेवाद्वयं ।
तस्मै श्री गुरुमूर्तये नम इदं श्री दक्षिणामूर्तये ॥ 1 ॥

1. ಈ ಸ್ವಂತ ಅಸ್ತಿತ್ವವಿಲ್ಲದ ವಿಶ್ವವು ಕನ್ನಡಿಯಲ್ಲಿ ಕಾಣುವ ಪಟ್ಟಣದಂತೆ ಕಾಣುತ್ತದೆ, ಕನಸಿನ ಲೋಕದಂತೆ ತನ್ನ ಹೊರಗೆ ಇದ್ದಂತೆ ತೋರುತ್ತದೆ, ಎಂದು ತಿಳಿದ ಮೇಲೆ ಯಾವ ಆ ಅದ್ವಯವಾದ ಪ್ರಕಾಶಮಾನವಾದ ಆತ್ಮನು ತನ್ನ ಶ್ರೀಗುರುವಿನ ರೂಪದಲ್ಲಿಯೇ ಅವತರಿಸಿದ ದಿವ್ಯಪ್ರಭೆಯುಳ್ಳ ದಕ್ಷಿಣಾಮೂರ್ತಿಯೆಂದು ಬೆಳಗುತ್ತಾನೋ ಅವನಿಗೆ ನಮಸ್ಕಾರಗಳು.

बीजस्यान्तरिवाङ्कुरो जगदिदं प्राङ्गिर्विकल्पं पुनः
मायाकल्पितदेशकालकलना वैचित्र्यचित्रीकृतम् ।
मायावीव विजृम्भयत्यपि महायोगीव यः स्वेच्छया
तस्मै श्रीगुरुमूर्तये नम इदं श्रीदक्षिणामूर्तये ॥ 2 ॥

2. ಯಾರಲ್ಲಿ ಸೃಷ್ಟಿಗಿಂತ ಮೊದಲು, ಬೀಜದೊಳಗೆ ಅಂಕುರವು ಅವ್ಯಕ್ತಸ್ಥಿತಿಯಲ್ಲಿ ಇರುವಂತೆ, ಈ ಪ್ರಪಂಚವು ಅವಿಭಕ್ತಸ್ಥಿತಿಯಲ್ಲಿತ್ತು ಮತ್ತು ಯಾರು ತನ್ನ ಇಚ್ಛೆಯಿಂದ ಈ ಎಲ್ಲ ದೇಶ, ಕಾಲ ಇತ್ಯಾದಿ ವೈವಿಧ್ಯಗಳಿಂದ ಕೂಡಿದ ಅದನ್ನು ಮಾಯಾವಿಯಂತೆ, ಅಥವಾ ಯೋಗಿಯಂತೆ ವಿಹಂಗಮದೃಶ್ಯವನ್ನಾಗಿ ಮಾಡಿದನೋ, ಆ ತನ್ನ ಶ್ರೀಗುರುವಿನ ರೂಪದಲ್ಲಿಯೇ ಅವತರಿಸಿದ ದಿವ್ಯಪ್ರಭೆಯಿಂದ ಬೆಳಗುವ ದಕ್ಷಿಣಾಮೂರ್ತಿಗೆ ನಮಸ್ಕಾರಗಳು.

यस्यैव स्फुरणं सदात्मकमसत्कल्पार्थगं भासते
साक्षात्तत्त्वमसीति वेदवचसा यो बोधयत्याश्रितान् ।
यत्साक्षात्करणाद्भवेन्न पुनरावृत्तिर्भवाम्भोनिधौ
तस्मै श्रीगुरुमूर्तये नम इदं श्रीदक्षिणामूर्तये ॥ 3 ॥

3. ಯಾರ ಪ್ರಕಾಶಕರವಾದ ಇರುವಿಕೆಯೇ ತಾನೇತಾನಾಗಿಯೇ ಅಸತ್ತಾದ ಜಡವಸ್ತುಗಳನ್ನೂ ತೋರಿಸುವದೋ, ಯಾರು, ವಿಧಿವತ್ತಾಗಿ ತನ್ನನ್ನು ಆಶ್ರಯಿಸಿದವರಿಗೆ, ತತ್ತ್ವಮಸಿ ಎಂಬ ವೇದವಾಕ್ಯದಿಂದ ನೇರವಾಗಿ ತನ್ನ ಸ್ವರೂಪವನ್ನು ತೋರಿಸಿಕೊಡುವನೋ, ಮತ್ತು ಯಾರನ್ನು ಸಾಕ್ಷಾತ್ಕರಿಸಿಕೊಳ್ಳುವದರಿಂದ ಜೀವಿಯು ಮತ್ತೆಮತ್ತೆ ಜನ್ಮವೆತ್ತಿ ಸಂಸಾರಸಾಗರದಲ್ಲಿ ಬೀಳಲಾರನೋ, ಆ ತನ್ನ ಶ್ರೀಗುರುವಿನ ರೂಪದಲ್ಲಿಯೇ ಅವತರಿಸಿದ ದಿವ್ಯಪ್ರಭೆಯಿಂದ ಬೆಳಗುವ ದಕ್ಷಿಣಾಮೂರ್ತಿಗೆ ನಮಸ್ಕಾರಗಳು.

नानाच्छिद्रघटोदरस्थितमहादीपप्रभाभास्वरं
ज्ञानं यस्य तु चक्षुरादिकरणद्वारा बहिः स्पन्दते ।
जानामीति तमेव भान्तमनुभात्येतत्समस्तं जग-
तस्मै श्रीगुरुमूर्तये नम इदं श्रीदक्षिणामूर्तये ॥ 4 ॥

4. ಯಾರ ಚೈತನ್ಯರೂಪಜ್ಞಾನವು ಹಲವು ರಂಧ್ರಗಳುಳ್ಳ ಮಡಕೆಯ ಒಳಗಿಟ್ಟ ದೊಡ್ಡದೀಪದ ಬೆಳಕಿನಂತೆ ಕಣ್ಣು, ಕಿವಿ, ಮುಂತಾದ ಜ್ಞಾನೇಂದ್ರಿಯಗಳ ಮೂಲಕ ಹೊರಗೆ ಬರುವ ಮೂಲಕವೇ "ನಾನು ತಿಳಿಯುತ್ತೇನೆ" ಎಂದು ಈ ಜಗತ್ತೆಲ್ಲವೂ ಬೆಳಗುತ್ತಿರುವದೋ ಆ ತನ್ನ ಶ್ರೀಗುರುವಿನ

ರೂಪದಲ್ಲಿಯೇ ಅವತರಿಸಿದ ದಿವ್ಯಪ್ರಭೆಯಿಂದ ಬೆಳಗುವ ದಕ್ಷಿಣಾಮೂರ್ತಿಗೆ ನಮಸ್ಕಾರಗಳು.

देहं प्राणमपीन्द्रियाण्यपि चलां बुद्धिं च शून्यं विदुः
स्त्रीबालान्धजडोपमास्त्वहमिति भ्रान्ता भृशं वादिनः ।
मायाशक्तिविलासकल्पितमहाव्यामोहसंहारिणे
तस्मै श्रीगुरुमूर्तये नम इदं श्रीदक्षिणामूर्तये ॥ 5 ॥

5. ಯಾರು ತಿಳಿಯದಂತಹ ಹೆಂಗಸರು, ಬಾಲಕರು, ಕುರುಡರು, ದಡ್ಡರಂತಿರುವರು ದೇಹ, ಪ್ರಾಣ, ಇಂದ್ರಿಯಗಳು, ಕ್ಷಣಿಕಬುದ್ಧಿಯನ್ನು, ಅಥವಾ ಶೂನ್ಯವನ್ನು ತಾನೆಂದು ತಿಳಿದು ವ್ಯರ್ಥ ಮತ್ತು ರಭಸದ ವಾದಗಳಲ್ಲಿ ತೊಡಗುವಂತೆ ಮಾಡುವ ಮಾಯಾಶಕ್ತಿಯ ಮಹಾ ಮೋಡಿಯನ್ನು ನಾಶಪಡಿಸುತ್ತಾರೋ ಆ ತನ್ನ ಶ್ರೀಗುರುವಿನ ರೂಪದಲ್ಲಿಯೇ ಅವತರಿಸಿದ ದಿವ್ಯಪ್ರಭೆಯಿಂದ ಬೆಳಗುವ ದಕ್ಷಿಣಾಮೂರ್ತಿಗೆ ನಮಸ್ಕಾರಗಳು.

राहुग्रस्तदिवाकरेन्दुसदृशो मायासमाच्छादना-
सन्मात्रः करणोपसंहरणतो योऽभूत्सुषुप्तः पुमान् ।
प्रागस्वाप्समिति प्रबोधसमये यः प्रत्यभिज्ञायते
तस्मै श्रीगुरुमूर्तये नम इदं श्रीदक्षिणामूर्तये ॥ 6 ॥

6. ಯಾರು ಎಲ್ಲ ಜ್ಞಾನೇಂದ್ರಿಯಗಳನ್ನು ಮತ್ತು ಕರ್ಮೇಂದ್ರಿಯಗಳನ್ನು ಮತ್ತು ಅಂತರಿಂದ್ರಿಯವನ್ನು ಒಳಗೆ ಸೆಳೆದುಕೊಂಡು ಗಾಢವಾದ ನಿದ್ರೆಗೆ ಹೋದಾಗ ಗ್ರಹಣಕಾಲದ ಸೂರ್ಯ ಅಥವಾ ಚಂದ್ರನಂತೆ ಮಾಯೆಯಿಂದ ಆವರಿಸಲ್ಪಟ್ಟ ಅದ್ವಯವಾದ ಅಸ್ತಿತ್ವವೇ ಆಗುತ್ತಾನೋ, ಎಚ್ಚತ್ತ ಮೇಲೆ ಆ ಅನುಭವವನ್ನು 'ಇಲ್ಲಿಯ ವರೆಗೆ ನಾನು ಮಲಗಿದ್ದೆ' ಎಂದು ಸ್ಮರಿಸಿಕೊಳ್ಳುತ್ತಾನೋ ಆ ತನ್ನ ಶ್ರೀಗುರುವಿನ ರೂಪದಲ್ಲಿಯೇ ಅವತರಿಸಿದ ದಿವ್ಯಪ್ರಭೆಯಿಂದ ಬೆಳಗುವ ದಕ್ಷಿಣಾಮೂರ್ತಿಗೆ ನಮಸ್ಕಾರಗಳು.

बाल्यादिष्वपि जाग्रदादिषु तथा सर्वास्ववस्थास्वपि
व्यावृत्तास्वनुवर्तमानमहमित्यन्तः स्फुरन्तं सदा ।
स्वात्मानं प्रकटीकरोति भजतां यो मुद्रया भद्रया
तस्मै श्रीगुरुमूर्तये नम इदं श्रीदक्षिणामूर्तये ॥ 7 ॥

7. ಒಂದಕ್ಕೊಂದು ಬೇರೆಬೇರೆಯೇ ಆಗಿರುವ ಬಾಲ್ಯ, ಕೌಮಾರ, ಯೌವನ, ಮುಪ್ಪು, ಮೊದಲಾದ ಅವಸ್ಥೆಗಳಲ್ಲಿಯೂ ಮತ್ತು ಎಚ್ಚರ, ಕನಸು, ನಿದ್ರೆ, ಮೂರ್ಛೆ ಮುಂತಾದ ಅವಸ್ಥೆಗಳಲ್ಲಿಯೂ, ನಿರಂತರವಾಗಿ ಅನುಸರಿಸಿಕೊಂಡೇ ಬರುತ್ತಿರುವ ಮತ್ತು ಶರೀರದೊಳಗೆ 'ನಾನು' ಎಂದು ಸದಾಕಾಲವೂ ಸ್ಫುರಿಸುತ್ತಿರುವ, ತನ್ನ ಆತ್ಮವನ್ನೇ ತನ್ನ ಭಕ್ತರಿಗೆ ಮಂಗಳಕರವಾದ ಜ್ಞಾನಮುದ್ರೆಯಿಂದ ತೋರಿಸುತ್ತಿರುವನೋ ಆ ತನ್ನ ಶ್ರೀಗುರುವಿನ ರೂಪದಲ್ಲಿಯೇ ಅವತರಿಸಿದ ದಿವ್ಯಪ್ರಭೆಯಿಂದ ಬೆಳಗುವ ದಕ್ಷಿಣಾಮೂರ್ತಿಗೆ ನಮಸ್ಕಾರಗಳು.

विश्वं पश्यति कार्यकारणतया स्वस्वामिसंबन्धतः
शिष्याचार्यतया तथैव पितृपुत्राद्यात्मना भेदतः ।
स्वप्ने जाग्रति वा य एष पुरुषो मायासमाच्छादितः
तस्मै श्रीगुरुमूर्तये नम इदं श्रीदक्षिणामूर्तये ॥ 8 ॥

8. ಯಾವ ಆ ಪರಿಪೂರ್ಣ ಪರಮಾತ್ಮನು ಮಾಯೆಯಿಂದಾಗಿ ತಾನು ಸಂಸಾರಿ ಎಂದು ಭ್ರಮಿಸಿ (ಭ್ರಮಿಸದೆಯೇ), ಎಚ್ಚರ, ಕನಸು ಎಂಬ ಅವಸ್ಥೆಗಳಲ್ಲಿ 'ಈ ಪ್ರಪಂಚವು ಕಾರ್ಯಕಾರಣ ಸಂಬಂಧ-ವುಳ್ಳದ್ದಾಗಿರುವದೆಂದೂ, ಸ್ವಾಮಿ-ಸೇವಕ ಸಂಬಂಧವುಳ್ಳದ್ದಾಗಿ-ರುವದೆಂದೂ, ಗುರು-ಶಿಷ್ಯ ಸಂಬಂಧವುಳ್ಳದ್ದಾಗಿರುವದೆಂದೂ' ಹೀಗೆ ಬಗೆಬಗೆಯ ಭೇದಭಾವದಿಂದ ನೋಡುತ್ತಿರುತ್ತಾನೆಯೋ ಆ ತನ್ನ ಶ್ರೀಗುರುವಿನ ರೂಪದಲ್ಲಿಯೇ ಅವತರಿಸಿದ ದಿವ್ಯಪ್ರಭೆಯಿಂದ ಬೆಳಗುವ ದಕ್ಷಿಣಾಮೂರ್ತಿಗೆ ನಮಸ್ಕಾರಗಳು.

भूरम्भांस्यनलोऽनिलोऽम्बरमहर्नाथो हिमांशुः पुमान्
इत्याभाति चराचरात्मकमिदं यस्यैव मूर्त्यष्टकम् ।
नान्यत्किञ्चन विद्यते विमृशतां यस्मात्परस्माद्विभोः
तस्मै श्रीगुरुमूर्तये नम इदं श्रीदक्षिणामूर्तये ।। 9 ।।

9. ನಮ್ಮ ಕಣ್ಣಿಗೆ ಕಾಣಿಸುತ್ತಿರುವ ಈ ಜಗತ್ತೇ ಪರಮಾತ್ಮನ ಬಾಹ್ಯರೂಪವಾಗಿದೆ. ಏಕೆಂದರೆ ಮಣ್ಣು, ನೀರು, ಬೆಂಕಿ, ಗಾಳಿ, ಆಕಾಶ, ಸೂರ್ಯ ಚಂದ್ರರು, ಮತ್ತು ಚರಾಚರಾತ್ಮಕವಾಗಿರುವ ಈ ಜಗತ್ತು ಪರಮಾತ್ಮನ [ಅಷ್ಟರೂಪ] ಮೂರ್ತಿಗಳಾಗಿಯೇ ತೋರಿಬರುತ್ತದೆ. ತಾತ್ತ್ವಿಕವಾಗಿ ವಿಚಾರಮಾಡುವವರಿಗೆ ಸರ್ವಕಾರಣನೂ, ಸರ್ವಶ್ರೇಷ್ಠನೂ, ಸರ್ವವ್ಯಾಪಕನೂ, ಆದ ಪರಮಾತ್ಮನಿಗಿಂತ ಮಿಗಿಲಾದ ಬೇರೇನೂ ಇರುವದೇ ಇಲ್ಲ. ಆ ತನ್ನ ಶ್ರೀಗುರುವಿನ ರೂಪದಲ್ಲಿಯೇ ಅವತರಿಸಿದ ದಿವ್ಯಪ್ರಭೆಯಿಂದ ಬೆಳಗುವ ದಕ್ಷಿಣಾಮೂರ್ತಿಗೆ ನಮಸ್ಕಾರಗಳು.

सर्वात्म(त्मा)त्वमिति स्फुटीकृतमिदं यस्मादमुष्मिंस्तवे
तेनास्य श्रवणात्तदर्थमननाद्ध्यानाच्च संकीर्तनात्।
सर्वात्मत्वमहाविभूतिसहितं स्यादीश्वरत्वं स्वतः
सिध्येत्तत्पुनरष्टधा परिणतं चैश्वर्यमव्याहतम् ॥ 10 ॥

10. ಉಪನಿಷತ್ತಿನಲ್ಲಿ ಹೇಳಿರುವ 'ಇದೆಲ್ಲವೂ ಆತ್ಮನೇ ಆಗಿರುವದು' ಎಂಬ ಸರ್ವಾತ್ಮಭಾವವೇ, ದಕ್ಷಿಣಾಮೂರ್ತಿ ಸ್ತೋತ್ರದಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ. ಆದ್ದರಿಂದ ಯಾರು ಈ ದಕ್ಷಿಣಾಮೂರ್ತಿಸ್ತೋತ್ರವನ್ನು ಸದಾ ಶ್ರವಣ ಮಾಡುತ್ತರೋ, ಶ್ರವಣಮಾಡಿದ್ದನ್ನು ಮನನ ಮಾಡುತ್ತಾರೋ, ಶ್ರವಣಮನನಗಳಿಂದ ತಿಳಿದದ್ದನ್ನು ಮನಸ್ಸಿನಿಂದ ನಿರಂತರ ಧ್ಯಾನ ಮಾಡುತ್ತಾರೋ ಮತ್ತು ಆ ತತ್ತ್ವವನ್ನು ಬೇರೆಯವರಿಗೆ ತಿಳಿಸಿಕೊಡುತ್ತಾರೋ ಅಂತಹವರಿಗೆ ಸರ್ವಾತ್ಮತ್ವವೆಂಬ ಮಹಾಸಂಪತ್ತಿನಂದ ಕೂಡಿದ, ಈಶ್ವರತ್ವವು ತಾನಾಗಿಯೇ ಉಂಟಾಗುವದು. [ಅಂದರೆ, ಅವರಲ್ಲಿಯೇ ಇರುವ ಈಶ್ವರತ್ವವು ಈಗ

ತಿಳಿದುಬರುವದು.] ಮತ್ತು ಯಾವ ತೊಂದರೆಯೂ ಇಲ್ಲದಂತೆ ಅಂತಹವರಿಗೆ ಅಣಿಮಾದಿ ಅಷ್ಟೈಶ್ವರ್ಯಗಳು ಸಿದ್ಧಿಸುವವು.

* * * * * * * * * *

# ಮಂಗಲಾಚರಣಮ್

## ಶ್ರೀಃ

## ಶ್ರೀ ಗುರುಭ್ಯೋ ನಮಃ

अजात इत्येवं कश्चिद्भीरुः प्रपद्यते ।
रुद्र यत्ते दक्षिणं मुखं तेन मां पाहि नित्यम् ॥

यस्माद्विश्वमुदेति यत्र निवसत्यन्ते यदप्येति यत्
सत्यज्ञानसुखस्वरूपमवधिद्वैतप्रणाशोज्झितम् ।
यज्जाग्रत्स्वप्नप्रसुषुप्तिषु विभात्येकं विशोकं परम्
प्रत्यग्ब्रह्म तदस्मि यस्य कृपया तं देशिकेन्द्रं भजे ॥
नैयग्रोधतटोत्तमासनलसन्मौनी पुराणः पुमान्
संसारांबुधिमग्नलोकततिमुद्धर्तुं कृपासागरः ।
त्यक्त्वा मौनमपास्य वृक्षतटमप्याराद्गृहीत्वा परं
यद्रूपं परतत्त्वमार्गमतनोत्तं शङ्करार्यं भजे ॥

[ಹುಟ್ಟು ಇಲ್ಲದವನು ನೀನು; (ಸಂಸಾರದ) ಯಾತನೆಯ ಭಯದಲ್ಲಿ ಭೀತರಾಗಿರುವ (ನನ್ನಂಥ)ವರು ನಿನ್ನಲ್ಲಿ ಆಶ್ರಯವನ್ನು ಪಡೆಯುತ್ತಾರೆ. ಎಲೈ ! (ಅಜ್ಞಾನವನ್ನು ನಾಶಮಾಡುವ) ಭಗವಾನ್ ರುದ್ರನೇ! ಉತ್ಸಾಹಜನಕವಾದ, ದಕ್ಷಿಣಕ್ಕೆ ತಿರುಗಿರುವ ನಿನ್ನ ಕೃಪಾದೃಷ್ಟಿಪೂರಿತ ಮುಖದಿಂದ ಸದಾ ನನ್ನನ್ನು ರಕ್ಷಿಸು.(ಶ್ವೇ.ಉ. 4-21).

ಯಾರ ಕರುಣೆಯಿಂದ ನಾನು ನನ್ನ ಆತ್ಮಸ್ವರೂಪವನ್ನು ಪ್ರತ್ಯಕ್ಷೀಕರಿಸಿಕೊಳ್ಳುತ್ತೇನೋ, ಯಾರಿಂದ ಈ ವಿಶ್ವವು ಹುಟ್ಟುವಡೆಯುವದೋ, ಯಾರಲ್ಲಿ ಇರುವಿಕೆಯನ್ನು ಪಡೆಯುವದೋ, ಕೊನೆಗೆ ಯಾರಲ್ಲಿ ಲಯವನ್ನು ಹೊಂದುವದೋ, ಸತ್-ಚಿತ್-ಆನಂದಗಳು ಯಾರ ಸ್ವರೂಪವೇ ಆಗಿವೆಯೋ, ಎಲ್ಲ ಮೇರೆಗಳನ್ನೂ ಮೀರಿ ಯಾವುದು ಆಚೆ ಇದೆಯೋ, ಯಾವುದು ದ್ವೈತಭಾವ ಶೂನ್ಯವಾಗಿದೆಯೋ, ಯಾವುದು ನಾಶರಹಿತವಾಗಿದೆಯೋ, ಜಾಗ್ರತ್-ಸ್ವಪ್ನ-ಸುಷುಪ್ತಿಗಳೆಂಬ ಮೂರವಸ್ಥೆಗಳಲ್ಲಿಯೂ ಯಾವುದು ಅನೂಚಾನವಾಗಿ ಬೆಳಗುತ್ತ, ಶೋಕರಹಿತವಾಗಿದೆಯೋ, ಯಾವುದು ಅಚಿಂತ್ಯವಾಗಿದೆಯೋ, ಆ

ಆತ್ಮಸ್ವರೂಪವಾದ, ಪರಬ್ರಹ್ಮಸ್ವರೂಪವಾದ, ಪರಮಪರಾತ್ಪರ ಗುರುವಿಗೆ (ದೇಶಿಕೇಂದ್ರನಿಗೆ) ನಾನು ಪೂಜ್ಯಾತಿಪೂಜ್ಯಭಾವದಿಂದ ನನ್ನನ್ನೇ ಸಮರ್ಪಿಸಿಕೊಳ್ಳುತ್ತೇನೆ. (ಶರಣು ಹೋಗುತ್ತೇನೆ).

ಸಂಸಾರವೆಂಬ ಸಾಗರದಲ್ಲಿ ಮುಳುಗಿ ತೊಳಲುತ್ತಿರುವ ಮಾನವಕೋಟಿಯನ್ನುದ್ಧರಿಸಲು, ವಟವೃಕ್ಷದ ಕೆಳಗೆ ಪ್ರಕಾಶಮಾನವಾಗಿ ಕಂಗೊಳಿಸುತ್ತ, ಪರಮಾನಂದವನ್ನು ಉಕ್ಕಿಸುತ್ತಿರುವ ಭಂಗಿಯಲ್ಲಿ, ಮೌನವಾಗಿ ಕುಳಿತಿದ್ದ ಪುರಾಣಪುರುಷನು, ಆ ವಟವೃಕ್ಷದ ಬುಡದಿಂದೆದ್ದು, ಮೌನವನ್ನು ಮುರಿದು, ಮಹಿಮಾನ್ವಿತವಾದ ಶಂಕರಾಚಾರ್ಯ ಎಂಬ ಮತ್ತೊಂದು ದಿವ್ಯರೂಪವನ್ನು ತಾಳಿ, ಪರಬ್ರಹ್ಮವನ್ನು ಪಡೆಯುವ ಸಾಧನಮಾರ್ಗವನ್ನು ಲೋಕಕ್ಕೆಲ್ಲ ತಿಳಿಸಿದರು. ಅಂಥ ಪರಮಾಚಾರ್ಯ ಶ್ರೀ ಶಂಕರ ಭಗವತ್ಪಾದಾಚಾರ್ಯ ಗುರುವಿಗೆ ನಾನು ಪೂಜ್ಯಾತಿಪೂಜ್ಯಭಾವದಿಂದ ನನ್ನನ್ನೇ ಸಮರ್ಪಿಸಿಕೊಳ್ಳುತ್ತೇನೆ. (ಶರಣು ಹೋಗುತ್ತೇನೆ).]

-------------------------

# 1. ಪ್ರಸ್ತಾವನೆ

ದಕ್ಷಿಣಾಮೂರ್ತಿಸ್ತೋತ್ರವೆಂದು ಕರೆಯಲ್ಪಡುವ ಈ ದಿವ್ಯವಾದ ಸ್ತೋತ್ರವು ನಮ್ಮೆಲ್ಲರ ಪರಮಪರಾತ್ಪರ ಗುರುಗಳಾದ ಶ್ರೀಶಂಕರಭಗವತ್ಪಾದಾಚಾರ್ಯರಿಂದ ತತ್ತ್ವಜಿಜ್ಞಾಸುಲೋಕಕ್ಕೆಲ್ಲ ಕೊಡಲ್ಪಟ್ಟ ಅನುಪಮ ಕೊಡುಗೆಯಾಗಿದೆ. ದಯಾಪೂರ್ಣರಾದ ಶ್ರೀ ಶ್ರೀ ಆಚಾರ್ಯಪಾದರು, ಮನುಕುಲದ ಮೇಲೆ ಅಪಾರ ಕೃಪೆಮಾಡಿ ತಮ್ಮ ವಿದ್ವತ್ಪೂರ್ಣ ಮತ್ತು ಅನನ್ಯಸಾಧಾರಣ (ಪ್ರಸ್ಥಾನತ್ರಯೀ) ಭಾಷ್ಯಗಳನ್ನೂ ಹಾಗೂ ಎಷ್ಟೋ ಪ್ರಕರಣ ಗ್ರಂಥಗಳನ್ನೂ, ಹಾಗೂ ಬೆಲೆಕಟ್ಟಲಾಗದಷ್ಟು ಅನರ್ಘ್ಯಮೌಲ್ಯವುಳ್ಳ ವಿವಿಧ ದೇವತಾಸ್ತೋತ್ರ-ಗಳನ್ನೂ ಪ್ರಸಾದಿಸಿದ್ದಾರೆ. ಇದು ಈಗಾಗಲೇ ಎಲ್ಲರಿಗೂ ಗೊತ್ತಿರುವ ಸಂಗತಿಯೇ ಆಗಿದೆ. ಈ ರೀತಿಯಾಗಿ, ತಮ್ಮ ಅಮರಕೃತಿ-ತತಿಗಳ ಮುಖಾಂತರ, ಶ್ರದ್ಧಾಳುಗಳಾದ ಸತ್ಯದರ್ಶನಾಕಾಂಕ್ಷಿಗಳಿಗೆ, (ಅವರ ಸ್ವಭಾವ ಪ್ರವೃತ್ತಿಗಳು ಹೇಗೇ ಇದ್ದರೂ) ಹೆಜ್ಜೆಹೆಜ್ಜೆಗೂ ಮಾರ್ಗದರ್ಶನ ಮಾಡುವ ದಾರಿದೀಪವಾಗಿದ್ದಾರೆ. ಆಚಾರ್ಯಪಾದರ ಮೇಲ್ಕಾಣಿಸಿದ ಕೃತಿರತ್ನಗಳಲ್ಲಿ, 'ಶ್ರೀ ದಕ್ಷಿಣಾಮೂರ್ತಿಸ್ತೋತ್ರ'ವು ತನ್ನ ವಿಶೇಷಗುಣಲಕ್ಷಣಗಳಿಂದ, ಪ್ರಧಾನವೂ ಮಹೋಜ್ವಲವೂ ಆಗಿದೆ.

------------------------

## 1.1 ಶ್ರೀ ಶ್ರೀ ಆಚಾರ್ಯಪಾದರು ಶ್ರೀ ದಕ್ಷಿಣಾಮೂರ್ತಿಯ ಅವತಾರ ಸ್ವರೂಪರು

ಶ್ರೀ ವಿದ್ಯಾರಣ್ಯಪಾದರು ತಮ್ಮ **ಶಂಕರವಿಜಯ**(IV-60)ದಲ್ಲಿ ಪ್ರಮಾಣಿಸಿದಂತೆ ಗುರೂಣಾಂಗುರುಗಳಾದ ಶ್ರೀ ಶಂಕರಭಗವತ್ಪಾದರು ಶ್ರೀ ದಕ್ಷಿಣಾಮೂರ್ತಿಯೇ ಆಗಿದ್ದಾರೆ.

**अज्ञानान्तर्गहनपतितान् आत्मविद्योपदेशैः**
**त्रातुं लोकान् भवदवशिखातापपापच्यमानान् ।**
**मुक्त्वा मौनं वटविटपिनो मूलतो निष्पतन्ती**
**शम्भोर्मूर्तिश्चरति भुवने शङ्कराचार्यरूपा ॥**

(ಶಂಕರವಿಜಯ - IV-60)

[ಅಜ್ಞಾನವೆಂಬ ಅರಣ್ಯದಲ್ಲಿ ತೊಳಲಿಬಳಲುತ್ತಿರುವ ಜನರಿಗೆ ಮತ್ತು ಸಂಸಾರವೆಂಬ ಕಾಳ್ಗಿಚ್ಚಿನ ತಾಪದಲ್ಲಿ ಬೆಂದು ಬೆಂಡಾಗುತ್ತಿರುವ ಜನರಿಗೆ ಆತ್ಮವಿದ್ಯೆಯನ್ನು ಉಪದೇಶಿಸುವದಕ್ಕಾಗಿ ಶಂಭುವಿನ ಅವತಾರವಾಗಿದೆ. ಈ ಉದ್ದೇಶದಿಂದಲೇ ಮೌನವನ್ನು ತ್ಯಜಿಸಿ ವಟವೃಕ್ಷದ ಬುಡದಿಂದ ಶ್ರೀ ಸದಾಶಿವನ ಮೂರ್ತಿಯು ಎದ್ದು ಬಂದು ಲೋಕದಲ್ಲಿ ಶ್ರೀ ಶಂಕರಾಚಾರ್ಯರ ರೂಪದಿಂದ ಸಂಚರಿಸುತ್ತಿದೆ.]

(ಆದ್ದರಿಂದ) ಪರಮಗುರು ಶ್ರೀ ಶಂಕರಭಗವತ್ಪಾದಾಚಾರ್ಯರು ಭಗವಾನ್ ಶ್ರೀ ದಕ್ಷಿಣಾಮೂರ್ತಿಯಲ್ಲದೆ ಬೇರೆಯಲ್ಲ. ಕಾಲದ ಅವಶ್ಯಕತೆಯಿಂದ ಚೋದಿತನಾಗಿ ಶ್ರೀ ವಿಶ್ವೇಶ್ವರನು ಶ್ರೀ ಶಂಕರಭಗವತ್ಪಾದಾಚಾರ್ಯರ ರೂಪವನ್ನವಲಂಬಿಸಿ ಅವತರಿಸ-ಬೇಕಾಯಿತು.

ಪುರಾಣಗಳ ಪ್ರಕಾರ, ಭಗವಾನ್ ಶ್ರೀ ದಕ್ಷಿಣಾಮೂರ್ತಿಯು, ಪರಮತೇಜಸ್ವಿಯಾದ ಯುವಕನು. (ಅವನು) ವಟವೃಕ್ಷದ ಬುಡದಲ್ಲಿ ಕುಳಿತು, ವೃದ್ಧರಾದ ಶಿಷ್ಯರಿಗೆ ಆತ್ಮಜ್ಞಾನವನ್ನು ಬೋಧಿಸುತ್ತಿದ್ದಾನೆ. ವ್ಯಾಖ್ಯಾನವು ಮೌನವನ್ನೇ ಆಶ್ರಯಿಸಿದ್ದರೂ ಶಿಷ್ಯರೆಲ್ಲರನ್ನೂ ಕಾಡುತ್ತಿರುವ ಸಂಶಯಗಳೆಲ್ಲವೂ ಪರಿಹರಿಸಲ್ಪಡುತ್ತಿವೆ. ಇದನ್ನೇ ಈ ಮುಂದಿನ ಶ್ಲೋಕವು ಪ್ರಮಾಣಿಸುತ್ತದೆ. (ದಕ್ಷಿಣಾಮೂರ್ತಿ ಸ್ತೋತ್ರ 12 ನೆಯ ಶ್ಲೋಕ.)

**चित्रं वटतरोर्मूले वृद्धाः शिष्याः गुरुर्युवा ।**
**गुरोस्तु मौनं व्याख्यानं शिष्यास्तु च्छिन्नसंशयाः ॥**

ಇದು ಉಪನಿಷತ್ತುಗಳ ಪ್ರಾತಿನಿಧಿಕ ನಿರೂಪಣೆ. ಉಪನಿಷತ್ತುಗಳು ವೃಕ್ಷಮೂಲವನ್ನು ಉಪಮೆಯಾಗಿಟ್ಟುಕೊಂಡು, ವಿಶ್ವದ ಸೃಷ್ಟಿ-ಸ್ಥಿತಿ-ಲಯಗಳ (ರಹಸ್ಯವನ್ನು) ಉಪದೇಶಿಸುತ್ತವೆ. ವೃಕ್ಷಮೂಲವು ವಿಶ್ವದ ಆದಿ ಮೂಲವನ್ನು ಅರ್ಥಾತ್ ಪರಬ್ರಹ್ಮವನ್ನು ಸೂಚಿಸುತ್ತದೆಯೆಂಬುದು ತೈತ್ತಿರೀಯ ಶ್ರುತಿಯ ಆದೇಶ. (ಅದು ಈ ಮುಂದಿನಂತಿದೆ.)

**यतो वा इमानि भूतानि जायन्ते येन जातानि जीवन्ति यत्प्रयन्त्यभिसंविशन्ति** (ತೈ.ಉ. 3-1-3)

[ಈ (ಚರಾಚರ) ಭೂತಗಳೆಲ್ಲ ಯಾವುದರಿಂದ ಹುಟ್ಟುವಡೆದಿವೆಯೋ ಹೀಗೆ ಜನಿಸಿದ ಅವುಗಳು ಎಲ್ಲಿ ಇರುವನ್ನು ಪಡೆಯುತ್ತವೆಯೋ, ಅಸ್ತಮಿಸುವಾಗ ಎಲ್ಲಿ ಹೋಗಿ ಸೇರುತ್ತವೆಯೋ..]

ಇದನ್ನು ಬೋಧಿಸುತ್ತ, ಆಚಾರ್ಯಪಾದ ಶ್ರೀ ಶಂಕರರು **अवचनेनैव ब्रह्म प्रोवाच** [ಅವನಿಗೆ ಬ್ರಹ್ಮವನ್ನು ಮೌನವಾಗಿ ಉಪದೇಶಿಸಿದನು.] (ಬ್ರ.ಸೂ.ಭಾ-3-2-5-17) ಎಂದು ವಿವರಿಸಿದ್ದಾರೆ.

## 1.2. ದಕ್ಷಿಣಾಮೂರ್ತಿ ಎಂಬ ಶಬ್ದದ ಭಾವ

ದಕ್ಷಿಣಾಮೂರ್ತಿ ಶಬ್ದವನ್ನು ಈ ಮುಂದಿನಂತೆಯೂ ಅರ್ಥೈಸಲಾಗುತ್ತದೆ. **दक्षिणो जगत्सृष्टिस्थितिसंहारविषये समर्थश्चासौ अमूर्तिश्च अशरीरश्च इति दक्षिणामूर्तिः ।** `ವಿಶ್ವದ ಸೃಷ್ಟಿ-ಸ್ಥಿತಿ-ಸಂಹಾರವಿಷಯಗಳಲ್ಲಿ ಅವನೊಬ್ಬನು ಮಾತ್ರ `ದಕ್ಷನು'= ಸಮರ್ಥನು. ವಾಸ್ತವವಾಗಿ ಅವನು ಆಕಾರರಹಿತನು-ಅವನೇ ಉಪನಿಷತ್ ಪ್ರತಿಪಾದ್ಯನಾದ ಪರಬ್ರಹ್ಮವು' **ತತ್ತ್ವಸುಧಾ** ವ್ಯಾಖ್ಯಾನದಲ್ಲಿ ಈ ಶಬ್ದವನ್ನು ಈ ಮುಂದಿನಂತೆ ಅರ್ಥೈಸಿದ್ದಾರೆ.

**श्रिया** - अनाद्यचिन्त्यमायाशक्त्या **दक्षिणः** - सृष्टिस्थित्यन्त-विरचनानिपुणश्चासौ परमार्थत अमूर्तिश्च आकार-विशेषरहितः । 'अस्थूलमनणु' इत्यादिश्रुतेः ।

ಇದೂ ಅಲ್ಲದೆ,

**वटविटपिसमीपे भूमिभागे निषण्णं**
**सकलमुनिजनानां ज्ञानदातारमारात् ।**
**त्रिभुवनगुरुमीशं दक्षिणामुर्तिदेवं**
**जननमरणदुःखच्छेददक्षं नमामि ॥**

ಎಂಬ ಸುವಿಖ್ಯಾತವಾದ ಶ್ಲೋಕವು ಕೂಡ - ಸಾಧಕನು ಜನನ-ಮರಣಗಳೆಂಬ ಬಲೆಯಿಂದ (ಪಾಶದಿಂದ) ಬಿಡುಗಡೆಗೊಳಿಸಲು ಏಕಮಾತ್ರ ಸಮರ್ಥನಾದ ಈ ಪರಮದೇವನಿಗೆ ನಮಸ್ಕಾರ ಮಾಡುತ್ತಾನೆ. ಶರಣಾಗತ ಸಾಧಕರ ಮೂಲಾವಿದ್ಯೆಯನ್ನು ನಾಶಮಾಡಿ, ಜ್ಞಾನವನ್ನು ಪ್ರಸಾದಿಸಿ ದುಃಖ-ಅಜ್ಞಾನಗಳಿಂದ ಅವರಿಗೆ ಮುಕ್ತಿಯನ್ನು ಅನುಗ್ರಹಿಸುತ್ತಾನೆ. ಎಂಬ ಅರ್ಥವನ್ನೇ ದೃಢೀಕರಿಸುತ್ತದೆ. **ದಕ್ಷಿಣಾಮೂರ್ತ್ಯುಪನಿಷತ್ತು** (31) ಕೂಡ ಇದೇ ಭಾವವನ್ನೇ ಪ್ರಕಟಿಸುತ್ತದೆ.

**शेमुषी दक्षिणा प्रोक्ता सा यस्याभीक्षणे मुखम् ।**
**दक्षिणाभिमुखः प्रोक्तः शिवोऽसौ ब्रह्मवादिभिः ॥**

'ದಕ್ಷಿಣಾ' ಎಂಬ ಶಬ್ದಕ್ಕೆ 'ಅಖಂಡಾಕಾರವೃತ್ತಿ' ಎಂಬ ರೂಪದಲ್ಲಿರುವ ಬುದ್ಧಿ ಎಂದರ್ಥ. ಈ 'ಅಖಂಡಾಕಾರ ವೃತ್ತಿ'ಯೆಂಬುದೇ ಶಿವನನ್ನು ನೇರವಾಗಿ ಕಾಣುವ 'ಕಣ್ಣು.' ಆದ್ದರಿಂದಲೇ ಬ್ರಹ್ಮವಾದಿಗಳು ಶಿವನನ್ನು 'ದಕ್ಷಿಣಾಭಿಮುಖ' (ದಕ್ಷಿಣಾದಿಂದ ಕಾಣಲ್ಪಡುವವನು) ಎನ್ನುತ್ತಾರೆ. ಭಕ್ತನ ಹೃದಯದಲ್ಲಿ ಅವನ ಆತ್ಮನೇ ಆಗಿರುತ್ತ, ತನ್ನ ಸಹಜ-ಸ್ವಾಭಾವಿಕವಾದ ಆನಂದದಿಂದ, ಭಗವಂತನು ಭಕ್ತನ ವಿವೇಕವನ್ನು ಪುನರುಜ್ಜೀವಿಸುತ್ತಾನೆ. ಇಲ್ಲಿಯವರೆಗೂ ಭ್ರಮಾವಶವಾಗಿದ್ದ, ವಿಹಿತ ಸತ್ಯಶೋಧನಾವಿಚಾರಣೆಯಿಲ್ಲದೆ ದ್ವೈತಭಾವದಿಂದ ತುಳಿಯಲ್ಪಟ್ಟಿದ್ದ-ಸದ್ಬುದ್ಧಿಯನ್ನು ಅರ್ಥಾತ್, ಯಾವುದು ಸತ್ಯ ಯಾವುದು ಅಸತ್ಯ ಎಂದು ವಿಂಗಡಿಸಿ ತಿಳಿಯುವ ಬುದ್ಧಿಶಕ್ತಿಯನ್ನು, - ಪುನರುಜ್ಜೀವಿಸುತ್ತಾನೆ.

ಇದನ್ನೇ **ದಕ್ಷಿಣಾಮೂರ್ತ್ಯುಪನಿಷತ್ತು** 30 ನೆಯ ಮಂತ್ರದಲ್ಲಿ -

**तत्त्वाविचारपाशेन बद्धं द्वैतभयातुरम्**
**उज्जीवयन्निजानन्दे स्वस्वरूपेण संस्थितः ॥**

ಈ ರೀತಿಯಾಗಿ, ವಿಶ್ವದ ಒಡೆಯನಾದ ಈಶ್ವರ, ಅಜ್ಞಾನವನ್ನು ದೂರಮಾಡುವ ಶ್ರೀಗುರು, ಹಾಗೂ ಸಾಧಕನ ಸ್ವರೂಪವೇ ಆದ ಆತ್ಮ, ಈ ಮೂರೂ ಅಭಿನ್ನವಾಗಿವೆ. ಈ ಸ್ತೋತ್ರದ ಕೊನೆಯ ಶ್ಲೋಕದಲ್ಲಿ **अमुष्मिंस्तवे** ಎಂಬ ಪದಪ್ರಯೋಗದ ಮೂಲಕ, ಈ ಇಡೀ ಸ್ತೋತ್ರವು, ಸಮ್ಯಕ್-ಜ್ಞಾನವನ್ನು ದಯಪಾಲಿಸುವ, ವಿಶ್ವಾತ್ಮನ 'ಸದ್ಗುರುಭಾವವನ್ನು' ಗುಣಗಾನ ಮಾಡುವ 'ಪ್ರಾರ್ಥನೆ' ಎಂದು ಪ್ರತಿಪಾದಿಸಲಾಗಿದೆ.

ಸಾಧಕನು ಭಗವಂತನ ಅನುಗ್ರಹವನ್ನು ಸ್ವೀಕರಿಸಲು ಪಾತ್ರತೆ(ಅರ್ಹತೆ)ಯನ್ನು ಹೊಂದಿದ್ದರೆ ಮಾತ್ರ, ಈ ಸಮ್ಯಕ್-ಜ್ಞಾನವು, ಅವನಲ್ಲಿ ಉದಯಿಸುತ್ತದೆ.

**ಸೂತ್ರಭಾಷ್ಯ**ದಲ್ಲಿ (2-3-16-41) ಆಚಾರ್ಯಪಾದ ಶ್ರೀ ಶಂಕರರು ಕೂಡ ಇದೇ ರೀತಿಯಾಗಿ ಅಪ್ಪಣೆ ಕೊಡಿಸಿದ್ದಾರೆ.

**तदनुग्रहहेतुकेनैव च विज्ञानेन मोक्षसिद्धिर्भवितुमर्हति ।**

## 1.3. ಪ್ರಣಾಮಸೂಚಕವಾದ-ನಮಃ-ಎಂಬ ಚರಣಪಲ್ಲವಿಯು ಏಕಾತ್ಮತೆಯನ್ನು ಬೋಧಿಸುತ್ತದೆ.

ಆದ್ದರಿಂದ ಸಾಧಕನಿಗೆ ಗುರುವಿನಿಂದ ಅಭಿನ್ನನಾದ ಪರಮೇಶ್ವರನ ಕೃಪೆಯನ್ನು ಸಂಪಾದಿಸಿಕೊಳ್ಳುವದು ಅಗತ್ಯವಾಗಿದೆ. ಇದನ್ನು ಸಾಧಿಸುವದೇ ಈ ಸ್ತೋತ್ರದ ಗುರಿ. ಇದು ಶ್ರೀ ದಕ್ಷಿಣಾಮೂರ್ತಿ ಗುರುಭಗವಂತನ ಸ್ತೋತ್ರವಾಗಿದೆ. ಪ್ರತಿಯೊಂದು ಶ್ಲೋಕದ ಕೊನೆಯ ಸಾಲಿನಲ್ಲಿ ಬರುವ, **तस्मै श्रीगुरुमूर्तये नम इदं श्रीदक्षिणामूर्तये** ಎಂಬುದು ಈ ಸ್ತೋತ್ರದ ಚರಣಪಲ್ಲವಿಯಾಗಿದೆ. ಇದರಿಂದ ಸಾಧಕನ ಈ ಪ್ರಹ್ವೀಭಾವವು (ನಮಸ್ಕಾರವು) ಗುರುಸ್ವರೂಪನಾದ ಭಗವಂತನಿಗೇ ಎಂಬುದು ಸ್ಪಷ್ಟವಾಗಿದೆ. ಇದರಿಂದ ಸಾಧಕನು ಪ್ರಾರ್ಥಿಸುವ ಭಗವಂತನ ಅನುಗ್ರಹವು ಮೇಲೆ ಹೇಳಿದ ಸಮ್ಯಕ್-ಜ್ಞಾನದ ಸಿದ್ಧಿಗಾಗಿಯೇ ಎಂಬುದು ಕೂಡ ಅಷ್ಟೇ ಸ್ಪಷ್ಟವಾಗಿದೆ. ಈ ಸಂದರ್ಭದಲ್ಲಿ 'ನಮಃ' ಎಂಬ ಶಬ್ದದ ಮಹತ್ವವನ್ನು ಇದಕ್ಕಿಂತಲೂ ಹೆಚ್ಚು ಒತ್ತಿಹೇಳಲಾಗುವದಿಲ್ಲ. ಸಾಷ್ಟಾಂಗ ನಮಸ್ಕಾರದೊಂದಿಗೆ ಪ್ರಾರಂಭವಾಗುವ ಈ ಸ್ತೋತ್ರದ ಕೊನೆಯು, ಶ್ರೀ ಗುರುವಿನಲ್ಲಿ ಅಭೇದಭಾವನೆಯಿಂದ ಒಂದಾಗಿ ಅರ್ಥಾತ್ ಗುರುವಿನ ಸ್ವರೂಪದಲ್ಲಿ ಕರಗಿ ಹೋಗುವದು; ಶ್ರೀಗುರುವಿನೊಡನೆ ಅನನ್ಯವಾಗಿ ಬೆರೆತು ಹೋಗುವದು.

ಶ್ರೀ ವಿದ್ಯಾರಣ್ಯಸ್ವಾಮಿಚರಣರು **ಸೂತಸಂಹಿತೆಯ ಟೀಕೆಯಲ್ಲಿ** (4-8-10,11) ಅಭಿಪ್ರಾಯಿಸಿದಂತೆ:-

**अस्य च प्रह्वीभावस्य पर्यवसानभूमिमाह - प्रह्वता नामेति । न्यग्भावेन नमस्कर्तव्यप्रत्यासत्तिः प्रह्वत्वम् । तच्च मायया परशिवस्वरूपाद्भेदेन परिकल्पितस्य जीवस्य पुनस्तत्स्वरूपेण तादात्म्यलक्षणे संबन्धे विश्राम्यतीत्यर्थः ।**

ಈ ಶ್ಲಾಘನೀಯ ಉದ್ದೇಶದಿಂದ, ಶ್ರೀ ಪರಮಗುರುವು ಈ ಸ್ತವವನ್ನು ಪ್ರಸಾದಿಸಿದ್ದಾನೆ. ತದನುಸಾರವಾಗಿ, ನಿತ್ಯವೂ ಸಂಪ್ರದಾಯಾನುಸಾರವಾಗಿ ಕೈಕೊಳ್ಳುವ ಪ್ರಸ್ಥಾನತ್ರಯಭಾಷ್ಯದ ಪಾರಾಯಣದಲ್ಲಿ, ಶಾಂತಿಪಾಠದ ಜೊತೆಗೆ ಈ ಸ್ತವವನ್ನು (ಶ್ರೀ ದಕ್ಷಿಣಾಮೂರ್ತಿ ಸ್ತೋತ್ರವನ್ನು) ಹೇಳಲಾಗುತ್ತದೆ. ಈ ಸ್ತೋತ್ರವನ್ನು ಶ್ರದ್ಧಾಪೂರ್ವಕ ಸಂಕೀರ್ತನ ಮಾಡುವದರಿಂದ, ಈ ಸ್ತೋತ್ರದ ಕೊನೆಯ ಶ್ಲೋಕದಲ್ಲಿ ಹೇಳಿದಂತೆ ಹಾಗೂ **ಮಾನಸೋಲ್ಲಾಸ**ದಲ್ಲಿ ವಿವರಿಸಿದಂತೆ, ಅಷ್ಟಸಿದ್ಧಿ ಮುಂತಾದ ಇನ್ನೂ ಅನೇಕ ಇತರ ಫಲಗಳು ದೊರಕುತ್ತವೆ. ಅಪಸ್ಮಾರ ಮುಂತಾದ ರೋಗಗಳು ವಾಸಿಯಾಗುವದೇ ಮುಂತಾದ ಇನ್ನೂ ಅನೇಕ ಆನುಷಂಗಿಕ ಫಲಗಳು ಈ ಸ್ತೋತ್ರ ಪಾರಾಯಣಕ್ಕುಂಟು. ಇದರಿಂದ ಭಗವಾನ್ ಸದಾಶಿವನ ಸ್ವರೂಪರೇ ಆದ, ಆಚಾರ್ಯಪಾದ ಶ್ರೀ ಶಂಕರರು ಈ ಸ್ತೋತ್ರದಲ್ಲಿ ಮಂತ್ರಶಕ್ತಿಯನ್ನು ತುಂಬಿದ್ದಾರೆಂಬುದು ಸ್ಪಷ್ಟಪಡುತ್ತದೆ. ಹೀಗೆ ಈ ಸ್ತೋತ್ರವು ಆಚಾರ್ಯಪಾದಕೃತ ಸ್ತೋತ್ರ-ಸಾಹಿತ್ಯಮಾಲಿಕೆಯಲ್ಲಿ ಅತ್ಯಂತ ಪ್ರಧಾನ ಸ್ಥಾನವನ್ನು ಪಡೆಯುತ್ತದೆ.

## 1.4 ನವವಿಧ ಭಕ್ತಿ. ಅದರ ಮೂರು ಭಾವ-ಪ್ರಕಾರಗಳು

ಈ (ದಕ್ಷಿಣಾಮೂರ್ತಿ)ಸ್ತೋತ್ರವು ನಮ್ಮ ಭಕ್ತಿಸಾಹಿತ್ಯದಲ್ಲಿಯೂ ಸರ್ವೋತ್ಕೃಷ್ಟ ಸ್ಥಾನವನ್ನು ಪಡೆದಿದೆ. ಈ ಸ್ತೋತ್ರದಲ್ಲಿ ಭಕ್ತಿಯ ಉತ್ತಮೋತ್ತಮವಾದ ಸ್ವರೂಪವು ವರ್ಣಿಸಲ್ಪಟ್ಟಿದೆ. 'ತನ್ನಆತ್ಮಕ್ಕಿಂತ ಭಿನ್ನನಲ್ಲದ ಸಾಕ್ಷಾತ್ ಶ್ರೀ ದಕ್ಷಿಣಾಮೂರ್ತಿಯೇ ತನ್ನ ಗುರುವೂ ಆಗಿದ್ದಾನೆ.'ಎಂಬುದನ್ನು ಸಾಕ್ಷಾತ್ಕರಿಸಿಕೊಂಡ ಭಕ್ತನ ಭಾವಾಭಿವ್ಯಕ್ತಿಯ ಪರಿಯದು. ವೇದೋಪನಿಷತ್ತುಗಳಲ್ಲಿ ಕಂಡುಬರುವ ರೀತಿಯ ಆರ್ಷದರ್ಶನವದು. ಒಂದು ಉದಾಹರಣೆಯನ್ನು ಕೊಡಬೇಕೆಂದರೆ, 'अहं

वृक्षस्य रेरिवा...' .[ಸಂಸಾರವೆಂಬ ವೃಕ್ಷದ ಪ್ರೇರಕನು ನಾನೇ]......' (ತೈ ಉ.1-10 ಮತ್ತು 3-8), ಅಥವಾ, 'एतत्सामगायन्नास्ते हा ३ वु हा ३ वु हा ३ वु । अहमन्नमहमन्नमहमन्नम्...।' .[ಓ, ನಾನೇ ಅನ್ನವು...ಓ ನಾನೇ ಅನ್ನವು, ಓ ನಾನೇ ಅನ್ನವು] ಎಂಬ ಈ ಸಾಮವನ್ನು ಹಾಡುತ್ತ ಆತನು ಕುಳಿತುಕೊಳ್ಳುತ್ತಾನೆ.

ಇಂಥ ಭಕ್ತಿಯು ಆತ್ಮಜ್ಞಾನಿಗಳಿಗೆ (ಮುಕ್ತರಿಗೆ) ಸ್ವಯಂಸ್ಫೂರ್ತ ಹಾಗೂ ಸ್ವಾಭಾವಿಕವಾದರೆ, ಮುಮುಕ್ಷು ಸಾಧಕರಿಗೆ ಅದೇ ಭಕ್ತಿಯು ಆತ್ಮಜ್ಞಾನಕ್ಕೆ ಸಹಾಯಮಾಡುವ ಸಾಧನಸಾಮಗ್ರಿಯಾಗುತ್ತದೆ. ಕೃಪಾಳುಗಳಾದ ಆಚಾರ್ಯಪಾದ ಶ್ರೀ ಶಂಕರರಿಂದ, **ಗೀತಾಭಾಷ್ಯ**ದಲ್ಲಿ (2-55) ಈ ಅಂಶವು ಸ್ಪಷ್ಟಪಡಿಸಲ್ಪಟ್ಟಿದೆ. ಅದು ಮುಂದಿನಂತಿದೆ.

**सर्वत्रैव हि अध्यात्मशास्त्रे कृतार्थलक्षणानि यानि तान्येव साधनान्युच्यन्ते यत्नसाध्यत्वात् ।**

ಆಚಾರ್ಯಪಾದ ಶ್ರೀ ಸುರೇಶ್ವರರು ತಮ್ಮ **ನೈಷ್ಕರ್ಮ್ಯಸಿದ್ಧಿ**ಯಲ್ಲಿ (4-69) ಈ ಮುಂದಿನಂತೆ ಅಪ್ಪಣೆ ಕೊಡಿಸಿದ್ದಾರೆ.

**उत्पन्नात्मप्रबोधस्य त्वद्वेष्टृत्वादयो गुणाः ।**
**अयत्नतो भवन्त्यस्य न तु साधनरूपिणः ॥**

ಈ ಸಂದರ್ಭವನ್ನನುಲಕ್ಷಿಸಿಯೇ ಭಕ್ತಿಯ ಲಕ್ಷಣಗಳನ್ನು ಮುಂದಿನಂತೆ ವಿವರಿಸಲಾಗಿದೆ.

**स्वस्वरूपनुसन्धानं भक्तिरित्यभिधीयते** (ವಿ.ಚೂ.-32)

'**सा त्वस्मिन् परमप्रेमरूपा**' [ಭಗವಂತನಲ್ಲಿ ಪರಮಪ್ರೇಮವನ್ನು ಮಾಡುವದೇ ಭಕ್ತಿ.] ಎಂದು ನಾರದ ಭಕ್ತಿಸೂತ್ರವೂ, (ಸೂತ್ರ-2) '**सा पराऽनुरक्तिरीश्वरे**' (ಈಶ್ವರನಲ್ಲಿಡುವ ಗಾಢವಾದ ಪ್ರೇಮವೇ ಭಕ್ತಿ) ಎಂದು **ಶಾಂಡಿಲ್ಯಭಕ್ತಿಸೂತ್ರ**ವೂ (1-1-2) ಭಕ್ತಿಯ ನಿರ್ವಚನ ಮಾಡುತ್ತವೆ. ಈ ನಿರ್ವಚನದಿಂದ, ತನ್ನ ಆತ್ಮನೇ ಈಶ್ವರ ಎಂಬ ಅರಿವಿನಿಂದುಂಟಾದ ಭಕ್ತಿ ಎಂದು ನಿಷ್ಪನ್ನವಾಗುತ್ತದೆ. ಇಲ್ಲದಿದ್ದರೆ, ಶಾಂಡಿಲ್ಯ ಹಾಗೂ ನಾರದ **ಭಕ್ತಿಸೂತ್ರಗಳು** ಅಸ್ತಿತ್ವದಲ್ಲಿಯೇ ಇಲ್ಲದ

ಸಂದರ್ಭವನ್ನು ಉಲ್ಲೇಖಿಸುತ್ತವೆ ಎಂಬ ದೋಷಕ್ಕೆ ಭಾಜನವಾಗುತ್ತವೆ. ಪರಮಪ್ರೇಮವು ಒಬ್ಬ ವ್ಯಕ್ತಿಗೆ ತನ್ನ ಆತ್ಮದ ಬಗ್ಗೆ ಮಾತ್ರ ಇರಬಲ್ಲದು. ಈ ಅಂಶವನ್ನು **ಬೃಹದಾರಣ್ಯಕೋಪನಿಷತ್ತು** ಸ್ಪಷ್ಟಪಡಿಸಿದೆ. ಉಕ್ತ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯ ಮುನಿಗಳು ತಮ್ಮ ಸಹಧರ್ಮಚಾರಿಣಿ ಮೈತ್ರೇಯಿಗೆ ಉಪದೇಶಿಸುತ್ತ, ವ್ಯಕ್ತಿಯು ತನ್ನ ಪತಿ, ಪತ್ನಿ, ಮಕ್ಕಳು, ಸಂಪತ್ತು, ಪಶುಗಳು, ಬ್ರಾಹ್ಮಣತ್ವ, ಕ್ಷತ್ರಿಯತ್ವ, ಲೋಕಗಳು, ದೇವತೆಗಳು, ವೇದಗಳು ಇತ್ಯಾದಿ ಎಲ್ಲವನ್ನೂ ಪ್ರೀತಿಸುವದು ಮೂಲತಃ ಅವುಗಳಿಗಾಗಿ ಅಲ್ಲ, ಅವು ತನ್ನನ್ನೇ ಪ್ರೀತಿಸಿಕೊಳ್ಳುವ ಭೋಕ್ತೃವಿಗಾಗಿ ಎಂದು ನಿರ್ಣಯಿಸಿದ್ದಾರೆ. ಈ ಪ್ರಕರಣವನ್ನು ಉಪಸಂಹರಿಸುತ್ತ, ಉಪನಿಷತ್ತು

**न वा अरे सर्वस्य कामाय सर्वं प्रियं भवत्यात्मनस्तु कामाय सर्वं प्रियं भवति ।** (ಬೃ.ಉ. 4-5-6)

ಆದ್ದರಿಂದ ಪರಮಪ್ರೇಮವು ಯಾವಾಗಲೂ ತನ್ನ ಸ್ವಂತಕ್ಕಾಗಿ ಇರುತ್ತದೆಂಬುದು ನಿಶ್ಚಿತ. ಅದು ಯಾವದೇ ಸಂದರ್ಭದಲ್ಲಿಯೂ ಕ್ಷೀಣಿಸದು, ಯಾವಾಗಲೂ ಬದಲಾಗದು. ಅದು ಯಾವದೇ ರೀತಿಯ ನಿಬಂಧನಾರಹಿತವಾಗಿರುತ್ತದೆ. ಅದನ್ನು ಅವ್ಯಾಜಪ್ರೇಮ ಎನ್ನುತ್ತಾರೆ. ಭಗವಂತನ ಅಥವಾ ಗುರುಗಳ ವಿಷಯದಲ್ಲಿ ಇರುವ ಅವ್ಯಾಜಪ್ರೇಮವೇ ನಿಜವಾದ ಭಕ್ತಿ. ಈ ಭಕ್ತಿಯ ಮೂಲಕ ಭಗವಂತನನ್ನು ಅಥವಾ ಗುರುವನ್ನು ಭಕ್ತನು ತನ್ನ ಹೃದಯದಲ್ಲಿ ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಇದನ್ನೇ ಸಾಮಾನ್ಯವಾಗಿ ಪರಾಭಕ್ತಿ ಎಂದು ಕರೆಯುತ್ತಾರೆ. ಪರಾಭಕ್ತಿಯಲ್ಲಿ ಪ್ರಮಾದವೆಸಗಿದ ಭಕ್ತನು ಅನೇಕ ವಿಪತ್ತುಗಳಿಗೆ ಎರವಾಗಬೇಕಾಗುತ್ತದೆ. **ಸ್ವಾರಾಜ್ಯಸಿದ್ಧಿಯ** ಟೀಕೆಯಲ್ಲಿ [III-39] ಈ ಸಂಗತಿಯು ಸ್ಪಷ್ಟಪಡಿಸಲ್ಪಟ್ಟಿದೆ.

**शिव इत्यहमित्युभौ न भिन्नौ शिव एवाहमहं शिवस्स एव ।**
**यदि नैवमनात्मता शिवस्य प्रसरेदप्यशिवत्वमात्मनोऽपि।**

(ಸ್ವಾ.ಸಿ. III-39)

[ನಾನು ಮತ್ತು ಶಿವ ಇಬ್ಬರೂ ಭಿನ್ನರಲ್ಲವೇ ಅಲ್ಲ. ನಾನು ಸಾಕ್ಷಾತ್ ಶಿವನೇ! ಆ ಶಿವನು ಕೂಡ ನಾನೇ! ಇಲ್ಲವಾದರೆ ಶಿವನನ್ನು ಜಡತ್ವವು ಮುತ್ತಿಕೊಂಡೀತು; ಮತ್ತು ಆತ್ಮತತ್ತ್ವವನ್ನು ಅಮಂಗಲವು ಸುತ್ತಿಕೊಂಡೀತು.]
ಇದೇ ಪರಾಭಕ್ತಿಯೇ

**तस्मै श्रीगुरुमूर्तये नम इदं श्रीदक्षिणामूर्तये ।** ಎಂಬ ಪಲ್ಲವಿಯಲ್ಲಿ ಶ್ರದ್ಧೆಯಿಂದ ಪುನಃಪುನರುಚ್ಚರಿಸಲ್ಪಟ್ಟಿದೆ.

ಮೇಲ್ಕಾಣಿಸಿದ ಸ್ತೋತ್ರದಲ್ಲಿ ಹೇಳಲ್ಪಟ್ಟ 'ನಮಃ' ಎಂಬ ಶಬ್ದದ ಅರ್ಥವನ್ನು ಈಗಾಗಲೇ ಹೇಳಿಯಾಗಿದೆ. ಶ್ರುತಿಯು ಕೂಡ **नमस्त्वैक्यं प्रवदेत्** (ರಾಮಪೂರ್ವ ತಾಪನ್ಯುಪನಿಷತ್ 2-4) ಅಂದರೆ, 'ದಂಡವತ್ ಪ್ರಣಾಮವು ಐಕ್ಯವನ್ನು ಅಭಿವ್ಯಕ್ತಿಗೊಳಿಸುತ್ತದೆ' ಎನ್ನುತ್ತದೆ. ಇದನ್ನೇ **ಭಾಗವತ**ದಲ್ಲಿ (7-5-23) 'ಆತ್ಮನಿವೇದನೆ' ಎಂದು ಉಲ್ಲೇಖಿಸಲಾಗಿದೆ.

**श्रवणं कीर्तनं विष्णोः स्मरणं पादसेवनम् ।**

**अर्चनं वन्दनं दास्यं सख्यमात्मनिवेदनम् ॥** (ಭಾಗವತ 7-5-23)

[ಮಹಾವಿಷ್ಣುವಿನ ಮಹಿಮಾತಿಶಯಗಳನ್ನು ಕೇಳುತ್ತಲೂ, ಹಾಡುತ್ತಲೂ, ಅವನನ್ನೇ ಕುರಿತು ಚಿಂತಿಸುತ್ತಲೂ, ಅವನ ಪಾದಸೇವೆ ಮಾಡುತ್ತಲೂ, ಅವನನ್ನೇ ಪೂಜಿಸುತ್ತಲೂ, ನಮಸ್ಕರಿಸುತ್ತಲೂ, ಅವನ ಸೇವೆ ಮಾಡುತ್ತಲೂ, ಅವನೊಡನೆ ತನ್ನ ಸ್ವಂತ ಸಖನಂತೆ ವ್ಯವಹರಿಸುತ್ತಲೂ, ಅವನಿಗೆ ತನ್ನನ್ನೇ ಸಮರ್ಪಿಸಿಕೊಳ್ಳುತ್ತಲೂ ಇರುವದೇ ನವವಿಧ ಭಕ್ತಿ.]

ಇದು ಭಕ್ತಿಯ ಒಂಭತ್ತು ಹಂತಗಳನ್ನು ಹೆಸರಿಸುತ್ತದೆ. ಇವುಗಳಲ್ಲಿ ಹಿಂದು ಹಿಂದಿನದು ಮುಂದು ಮುಂದಿನದಕ್ಕೆ ಸೋಪಾನವಾಗುತ್ತದೆ. ಆತ್ಮನಿವೇದನವೆಂದರೆ ಸಂಪೂರ್ಣ ಸಮರ್ಪಣೆ. ಶರೀರ ಮನೋಬುದ್ಧ್ಯಾದಿಗಳನ್ನು ಒಳಗೊಂಡ ಸಂಪೂರ್ಣಶರಣಾಗತಿ. ಇದನ್ನೇ ಭಗವದ್ಗೀತೆಯು (XVIII-66) **सर्वधर्मान्परित्यज्य मामेकं शरणं व्रज।** ಎಂದು ಅನುಶಾಸಿಸಿದೆ. ಸಾಧನೆಯ ಪಕ್ವತೆಯನ್ನೂ ತೀವ್ರತ್ವವನ್ನೂ ಅನುಸರಿಸಿ, ಭಗವಚ್ಛರಣತ್ವದ ಮೂರು ಹಂತಗಳನ್ನು ಆಚಾರ್ಯ ಶ್ರೀ ಮಧುಸೂದನಸರಸ್ವತೀಪಾದರು ತಮ್ಮ **ಭಗವದ್ಗೀತಾ ಗೂಢಾರ್ಥದೀಪಿಕಾದಲ್ಲಿ** (XVIII -66) ಗುರುತಿಸಿದ್ದಾರೆ.

**तस्यैवाहं ममैवाऽसौ स एवाहमिति त्रिधा ।**

**भगवच्छरणत्वं स्यात् साधनाभ्यासपाकतः ॥**

(ಭಗವದ್ಗೀತಾಟೀಕಾ XVIII-66)

**तस्मै श्रीगुरुमूर्तये नम इदं श्रीदक्षिणामूर्तये ।** ಎಂಬ ಪಲ್ಲವಿಯ ಅನುಸಂಧಾನ ಮಾಡುವಾಗ, 'ಅವನೇ ನಾನು' ಎಂಬ ಭಗವಚ್ಛರಣತ್ವದ ಹಂತದ ಅಭಿವ್ಯಕ್ತಿಯು ಕಾಣಬರುತ್ತದೆ. ಅದರಂತೆಯೇ ಶ್ರೀ

ದಕ್ಷಿಣಾಮೂರ್ತಿ ಸ್ತೋತ್ರದಲ್ಲಿ ಪ್ರಯೋಗಿಸಿದ 'ಆಶ್ರಿತಾನ್' ಹಾಗೂ 'ಭಜತಾಮ್' ಎಂಬ ಪದಗಳು 'ತಸ್ಯೈವಾಹಂ' ಮತ್ತು 'ಮಮೈವಾಸೌ' ಎಂಬ ಹಂತದ ಭಗವಚ್ಛರಣತ್ವವನ್ನು ಸೂಚಿಸುತ್ತವೆ ಎಂಬುದು ಸ್ಪಷ್ಟವಾಗಿದೆ. ಭಗವಾನ್ ಗೀತಾಚಾರ್ಯನು ಕೂಡ, ಈ ಸಂದರ್ಭದಲ್ಲಿ ಹೀಗೆಯೇ ಹೇಳಿದ್ದಾನೆ ಎಂಬುದನ್ನು ನೆನಪಿಸಿಕೊಳ್ಳುವದು ಶ್ರೇಯಸ್ಕರವಾಗಿದೆ.

मच्चित्ता मद्गतप्राणाः बोधयन्तः परस्परम् ।
कथयन्तश्च मां नित्यं तुष्यन्ति च रमन्ति च ॥
तेषां नित्ययुक्तानां भजतां प्रीतिपूर्वकम् ।
ददामि बुद्धियोगं तं येन मामुपयान्ति ते ॥
तेषामेवानुकम्पार्थमहमज्ञानजं तमः ।
नाशयाम्यात्मभावस्थो ज्ञानदीपेन भास्वता ॥

(ಗೀತೆ IX-9,10,11)

[ಜ್ಞಾನಿಗಳು ತಮ್ಮ ಮನಸ್ಸುಗಳನ್ನು ನನ್ನಲ್ಲಿಯೇ ನೆಟ್ಟವರಾಗಿ, ತಮ್ಮ ಸರ್ವಸ್ವವನ್ನು ನನಗೆ ಸಮರ್ಪಿಸಿದವರಾಗಿ, ನನ್ನನ್ನೇ ಕುರಿತು ಚಿಂತಿಸುತ್ತ (ಚರ್ಚಿಸುತ್ತ) ಒಬ್ಬರಿಗೊಬ್ಬರು ತಮ್ಮತಮ್ಮಲ್ಲಿಯೇ ತಿಳುವಳಿಕೆಯನ್ನುಂಟು-ಮಾಡಿಕೊಳ್ಳುತ್ತ, ತೃಪ್ತಿಯನ್ನೂ ಆನಂದವನ್ನೂ ಪಡೆಯುತ್ತಾರೆ.

ಈ ರೀತಿಯಾಗಿ ನಿರಂತರವಾಗಿ ಪ್ರೀತಿಪೂರ್ವಕವಾಗಿ ನನ್ನನ್ನೇ ಭಜಿಸುವ ಭಕ್ತರಿಗೆ ನಾನು ಬುದ್ಧಿಯೋಗವನ್ನು (ವಿವೇಕವನ್ನು= ನಿತ್ಯಾನಿತ್ಯವಸ್ತುವಿವೇಕವನ್ನು) ದಯಪಾಲಿಸುತ್ತೇನೆ. ಅದರಿಂದ ಅವರು (ತಮ್ಮ ಆತ್ಮವೇ ಆದ) ನನ್ನನ್ನು ಪಡೆಯುತ್ತಾರೆ.

ಅಂಥವರಿಗಾಗಿ ಮಾತ್ರ ನಾನು, ಅವರ ಹೃದಯಸ್ಥನಾಗಿ ಅವರ ಮೇಲಿನ ಕರುಣೆಯಿಂದ, ವಿವೇಕವೆಂಬ ಜ್ಞಾನಪ್ರಕಾಶಯುಕ್ತನಾಗಿ ಬೆಳಗುತ್ತ, ಅವರ ಅಜ್ಞಾನವೆಂಬ ಕತ್ತಲೆಯನ್ನು ನಾಶಮಾಡುತ್ತೇನೆ. ]

ಅದೇರೀತಿ **ಶ್ರೀದಕ್ಷಿಣಾಮೂರ್ತಿಸ್ತೋತ್ರ**ದ ಮೂರನೆಯ ಶ್ಲೋಕದ ಎರಡನೆಯ ಚರಣದಲ್ಲಿ ಇರುವ 'ಸಂಕೀರ್ತನಾತ್' ಎಂಬ ಶ್ರದ್ಧಾಭಕ್ತಿ ಸೂಚಕಪದವು **ಭಗವದ್ಗೀತೆ**ಯ (IX-14) ಶ್ಲೋಕದ ಭಾವಕ್ಕೆ ಸಂವಾದಿಯಾಗಿದೆ.

सततं कीर्तयन्तो मां यतन्तश्च दृढव्रताः ।

**नमस्यन्तश्च मां भक्त्या नित्ययुक्ता उपासते ॥**

(ಗೀತೆ IX-14)

[ನನ್ನನ್ನು ಶ್ಲಾಘಿಸುತ್ತ, ಸದಾಕಾಲವೂ ಸಾಧನೆಯಲ್ಲಿರುತ್ತ, ವ್ರತಗಳಲ್ಲಿ ಶ್ರದ್ಧೆಯಿಂದಿರುತ್ತ, ನನ್ನನ್ನು ಭಕ್ತಿಯಿಂದ ನಮಸ್ಕರಿಸುತ್ತ, ಸದಾ ದೃಢನಿಷ್ಠೆಯಿಂದಿರುತ್ತ]

ಈ ಶ್ಲೋಕದ ಭಾವವು ಕೂಡ ಜೀವ ಬ್ರಹ್ಮರ ಏಕಾತ್ಮಕತೆಯಲ್ಲೇ ಪರ್ಯವಸಾನ ಹೊಂದುತ್ತದೆ.

'ಸ ಏವಾಹಂ'ಎಂಬ ಹಂತಕ್ಕೆ ಸೋಪಾನದಂತಿರುವ 'ಮಮೈವಾಸೌ ಹಾಗೂ ತಸ್ಯೈವಾಹಂ' ಎಂಬ ಭಗವಚ್ಛರಣಾಗತಿಯ ಹಂತಗಳಲ್ಲಿ ಕೂಡ (ಜೀವ-ಪರಮರ) ಅಭೇದಭಾವದ ಸ್ಪಷ್ಟ ಧ್ವನಿಯಿದೆ. ಅದನ್ನು ಹಾಗೆಯೇ ಅರ್ಥೈಸಬೇಕು; ಅನ್ಯಥಾ ಅಲ್ಲ. ಇಲ್ಲವಾದರೆ, ಉದ್ದೇಶವೇ ನಿಷ್ಫಲವಾಗುತ್ತದೆ. ಅನ್ಯಥಾ ಅರ್ಥೈಸಿದರೆ, ಮೂಲಾರ್ಥವನ್ನೇ ಘಾತಿಸಿದಂತಾಗುತ್ತದೆ. ಮೂಲಾರ್ಥವನ್ನೇ ಘಾತಿಸಲು ಯಾರೂ ಬಯಸರು. ವರನು ಸಾಯಲೆಂದು ಯಾರೂ ತಮ್ಮ ಕನ್ಯೆಯನ್ನು ಕೊಡುವದಿಲ್ಲ. **न हि वरघाताय कन्यामुद्वाहयन्ति** (ಬ್ರ.ಸೂ.ಭಾ 4-1-1-2 ನೋಡಿ) ಈ ಸಂಬಂಧದಲ್ಲಿ, 'ತಾನು ಉಪಾಸನೆ ಮಾಡುವ ದೇವತೆಯು ತನ್ನ ಆತ್ಮವೆಂದೇ ಉಪಾಸಕನು ಧ್ಯಾನಿಸಬೇಕು' ಎಂದು ಶ್ರುತಿಯು ಹೇಳುತ್ತದೆ.

**त्वं वा अहमस्मि भगवो देवते अहं वै त्वमसि ।**

[ಎಲೈ ಪೂಜ್ಯನಾದ ದೇವತೆಯೇ, ನಾನೇ ನೀನಾಗಿದ್ದೇನೆ; ನೀನು ನಾನೇ ಆಗಿದ್ದೀಯೇ!] ಇದಕ್ಕೆ ಅನ್ಯಥಾ ಅರ್ಥ ಮಾಡಿದರೆ, ಅಂದರೆ ದ್ವೈತಪರವಾಗಿ ಅರ್ಥಮಾಡಿದರೆ, ಅಂಥ ಉಪಾಸಕನು ಅಜ್ಞಾನಿಯೆಂದೂ, ಅವನನ್ನು ದೇವತೆಗಳು ಪಶುವಿನಂತೆ ಕಾಣುತ್ತಾರೆ ಎಂದೂ ಮುಂದಿನ ಶ್ರುತಿಯು ಉದ್ಘೋಷಿಸುತ್ತದೆ.

**योऽन्यां देवतामुपास्तेऽन्योऽसावन्योऽहमस्मीति न स वेद यथा पशुरेव स देवानाम् ।** (ಬೃ.ಉ. 1-4-10)

ಶ್ರೀ **ದಕ್ಷಿಣಾಮೂರ್ತಿಸ್ತೋತ್ರದ** ೨ ನೆಯ ಶ್ಲೋಕದ ಮೇಲಿನ ವ್ಯಾಖ್ಯಾನಗಳು, ೨ ನೆಯ ಶ್ಲೋಕದಲ್ಲಿ ಉಲ್ಲೇಖಿಸಲ್ಪಟ್ಟ, ಸದಾಶಿವನ ಅಷ್ಟಮೂರ್ತಿಸ್ವರೂಪವು ಅರ್ಥಾತ್ ಬ್ರಹ್ಮಾತ್ಮತತ್ತ್ವವು,

ಉಪಾಸನಾರ್ಥವಾಗಿ ಹೇಳಲ್ಪಟ್ಟದ್ದು ಎಂಬುದು ಸ್ಪಷ್ಟ. ಅದರ ವಿವರವನ್ನು **ತತ್ತ್ವಸುಧಾ** ವ್ಯಾಖ್ಯಾನದಲ್ಲಿ ಮುಂದಿನಂತೆ ಕೊಟ್ಟಿದೆ.

**उपासकः स्वदेहे वर्तमानपञ्चभूतानि व्यष्टिभूतानि समष्टिभूतैः प्राणापानौ च सूर्यशशाङ्काभ्यामेकीकृत्य पञ्चभूतात्मकशरीराभिमानिनं स्वात्मानम् अष्टमुर्तिं परमेश्वरेण एकीकृत्य सकलव्यापी अष्टमूर्त्यात्मकः सदाशिवोऽस्मि इति चिन्तयेत् । ततो भावनातिशयेन तत्सायुज्यं प्राप्य सर्वैश्वर्यसंपन्नः अन्ते तत्प्रसादासादिततत्त्वज्ञानेन तत्त्वसाक्षात्कारेण विमुच्यत इति ॥**

[ತನ್ನ ದೇಹದಲ್ಲಿರುವ ಪಂಚಭೂತಗಳನ್ನು ಆಯಾ ಪಂಚಮಹಾಭೂತಗಳೊಂದಿಗೆ ಭಾವನಾತ್ಮಕವಾಗಿ ಏಕೀಕರಿಸಿ ಪ್ರಾಣಾಪಾನಗಳನ್ನು ಸೂರ್ಯಚಂದ್ರರೊಡನೆ ಏಕೀಕರಿಸಿ, ಪಾಂಚಭೌತಿಕ ಶರೀರದೊಡನೆ ತಾದಾತ್ಮ್ಯ ಹೊಂದಿದ ತನ್ನ ಆತ್ಮವನ್ನು ಪರಮೇಶ್ವರನೊಂದಿಗೆ ಜೋಡಿಸಿ, 'ಸಕಲವ್ಯಾಪಿಯಾದ ಅಷ್ಟಮೂರ್ತಿ ಸ್ವರೂಪನಾದ 'ಸದಾಶಿವನೇ ನಾನು' ಎಂದು ಉಪಾಸಕನು ಭಾವಿಸಬೇಕು. ಈ ಭಾವನೆಯ ಅತಿಶಯ ತೀವ್ರತೆಯಿಂದ, ಪರಮೇಶ್ವರನ ಸಾಯುಜ್ಯಹೊಂದಿ, ಸರ್ವೈಶ್ವರ್ಯ-ಸಂಪನ್ನನಾಗುತ್ತಾನೆ. ಕೊನೆಯಲ್ಲಿ ಪರಮೇಶ್ವರನ ಪ್ರಸಾದದಿಂದ ಅವನಿಗೆ ತತ್ತ್ವಜ್ಞಾನವುಂಟಾಗಿ, ತತ್ತ್ವಸಾಕ್ಷಾತ್ಕಾರವಾಗಿ, ಅವನು ಮುಕ್ತನಾಗುತ್ತಾನೆ.]

## 1.5. ಪರಾಭಕ್ತಿ ಮತ್ತು ಜ್ಞಾನನಿಷ್ಠೆ ಇವು ಭಿನ್ನವಲ್ಲವೆಂಬುದು ಸ್ಪಷ್ಟ.

ಸಾಧಕ ಭಕ್ತನು ಸದಾಕಾಲವೂ ಭಗವಂತನೊಡನೆ ತಾದಾತ್ಮ್ಯವನ್ನು ಭಾವಿಸುತ್ತಿರಬೇಕು. ಆದರೆ ಹಾಗೆ ಭಾವಿಸುವಾಗ ಅವನು ಪರಮಾತ್ಮನಿಂದ ಮತ್ತೇನನ್ನೂ, ಅಂದರೆ, ಸಂಸಾರದಿಂದ ಬಿಡುಗಡೆಯನ್ನೂ, ಅರ್ಥಾತ್ ಮೋಕ್ಷವನ್ನೂ ಕೂಡ, ಬೇಡಬಾರದು. ಯಾಕೆಂದರೆ, ಮೋಕ್ಷವನ್ನು ಬೇಡುವದೆಂದರೆ, ಬಂಧನದಿಂದ ಬಿಡುಗಡೆಯನ್ನು ಬೇಡಿದಂತೆಯೇ ಆಗುತ್ತದೆ. ಏನನ್ನಾದರೂ ಯಾಚಿಸಿದರೆ-ಅದು ಮೋಕ್ಷವೇ ಆಗಿರಲಿ-ಅದು ಫಲವನ್ನು ಬೇಡಿದಂತೆಯೇ ಆಗುತ್ತದೆ. ಅದನ್ನು ಭಗವಂತನು ಸಹಿಸನು. ಈ ಸಾಧನಮಾರ್ಗದಲ್ಲಿ, ತನ್ನ ಆದರ್ಶವನ್ನು (ಭಗವಂತನೊಡನೆ ತಾದಾತ್ಮ್ಯವನ್ನು) ಬಿಟ್ಟು ಬೇರಾವುದಕ್ಕೂ ಸ್ಥಾನವಿಲ್ಲ. ಶ್ರೀ ಗುರುವು-ಶ್ರೀ ಭಗವಂತನು, ಆನಂದಸ್ವರೂಪನೇ ಆದ್ದರಿಂದ, ಆ ಸ್ವರೂಪದೊಂದಿಗೆ ಏಕೀಭೂತನಾಗುವದೇ ಏಕೈಕ ಗುರಿಯಾಗಿರಬೇಕು. ಈ ರೀತಿ

ವಿಚಾರಿಸಿದರೆ, 'ಪರಾಭಕ್ತಿ' 'ಅಖಂಡಾಕಾರವೃತ್ತಿಜ್ಞಾನ' ಹಾಗೂ 'ನಿರುಪಾಧಿಕಾನುಭವ' ಇವೆಲ್ಲ ಒಂದೇ ಎಂಬುದು ಸ್ಪಷ್ಟ. ಈ ಸಾಧನದಿಂದ ಭಗವಂತನೊಡನೆ ತಾದಾತ್ಮ್ಯವು ಸಿದ್ಧಿಸುತ್ತದೆ.

ಅದೇ ಕಾರಣಕ್ಕಾಗಿ, (ತಸ್ಮಾದೇವ ಕಾರಣಾತ್) ಪರಾಭಕ್ತನು ಜೀವನ್ಮುಕ್ತನೂ ಹೌದು ಎಂಬುದು ಸಿದ್ಧಿಸುತ್ತದೆ. ಇದು ನಮ್ಮ ಆಧ್ಯಾತ್ಮಿಕ ಪರಂಪರೆಯಲ್ಲಿ ಸ್ಪಷ್ಟವಾಗಿ ಸುವ್ಯಕ್ತವಾಗಿ ನಿರ್ದೇಶಿಸಲ್ಪಟ್ಟಿದೆ.

**ಗೀತೆ**ಯ VII-16,17 ರಲ್ಲಿ ಭಗವಂತನು--

**चतुर्विधा भजन्ते मां जनाः सुकृतिनोऽर्जुन**

**आर्तो जिज्ञासुरर्थार्थी ज्ञानी च भरतर्षभ ।**

**तेषां ज्ञानी नित्ययुक्तः एकभक्तिर्विशिष्यते**

**प्रियो हि ज्ञानिनोऽप्यर्थमहं स च मम प्रियः ॥**

**उदाराः सर्व एवैते ज्ञानी त्वात्मैव मे मतम् ॥**

[ಎಲೈ ಅರ್ಜುನನೇ! ಪುಣ್ಯವಂತರಾದ ಈ ನಾಲ್ಕು ವಿಧದ ಜನರು ನನ್ನನ್ನು ಭಜಿಸುತ್ತಾರೆ. 1. ಸಂಕಟದಲ್ಲಿ ಇರುವವನೊಬ್ಬ; 2. ಪರಮಾತ್ಮ ತತ್ತ್ವವನ್ನು ತಿಳಿಯಬೇಕೆನ್ನುವವನೊಬ್ಬ; 3. ಸಂಪತ್ತನ್ನು ಬೇಡುವವನೊಬ್ಬ; ಹಾಗೂ ಕೊನೆಯದಾಗಿ 4. ಜ್ಞಾನಿಯೊಬ್ಬ. ಈ ನಾಲ್ವರಲ್ಲಿ ಜ್ಞಾನಿಯು ಮಾತ್ರ ನನ್ನಲ್ಲಿಯೇ ನಿಶ್ಚಲಭಕ್ತಿಯುಳ್ಳವನಾಗಿರುತ್ತಾನೆ. ಅದೇ ಅವನ ವೈಶಿಷ್ಟ್ಯ. ಅವನೇ ಈ ನಾಲ್ವರಲ್ಲಿ ಎಲ್ಲರಿಗಿಂತಲೂ ಹೆಚ್ಚಿನವನು. ಯಾಕೆಂದರೆ ಅವನು ನನಗೆ ಅತ್ಯಂತ ಪ್ರಿಯತಮನು. ನಾನೂ ಅವನಿಗೆ ಅತ್ಯಂತ ಪ್ರಿಯತಮನು. ಈ ಮೇಲೆ ಹೇಳಿದ ನಾಲ್ವರೂ ಉತ್ತಮರೇ ಆದರೂ, ನಾಲ್ಕನೆಯವನಾದ ಜ್ಞಾನಿಯು ಮಾತ್ರ ನನ್ನ ಆತ್ಮವೇ=ನಾನೇ ಎಂಬುದು ನನ್ನ ನಿಶ್ಚಿತವಾದ ಮತವು.']

ಅಲ್ಲದೆ, ಭಕ್ತಾಗ್ರೇಸರನಾದ ಪ್ರಹ್ಲಾದನು ತನ್ನ ಅದ್ವೈತಾನುಭವವನ್ನು ಪ್ರಕಟಿಸುತ್ತ, ಹೀಗೆ ಉದ್ಗರಿಸಿದ್ದಾನೆ.

**अहं त्वं त्वमहं देव दिष्टया भेदोऽस्ति नावयोः**

**दिष्टया मत्तामसि प्राप्तो दिष्टया त्वत्तामहं गतः ।**

**मह्यं तुभ्यमनन्ताय तुभ्यं मह्यं शिवात्मने**

**नमो देवाधिदेवाय पराय परमात्मने ॥** (ಯೋಗವಾಸಿಷ್ಠ - 5)

[ಭಗವಂತನೇ! ನಾನೇ ನೀನು; ನೀನೇ ನಾನು. ಸುದೈವದಿಂದ ನಮ್ಮಿಬ್ಬರಲ್ಲಿ ಭೇದವಿಲ್ಲ. ಸುದೈವದಿಂದ ನಾನು ನಿನ್ನನ್ನು ಹೊಂದಿದ್ದೇನೆ. ಸುದೈವದಿಂದ ನೀನು ನನ್ನನ್ನು ಹೊಂದಿದ್ದೀಯೇ! ಅನಂತನಾದ ಹಾಗೂ

ಶಿವಸ್ವರೂಪನಾದ ದೇವತೆಗಳಿಗೂ ದೇವನಾದ, ಎಲ್ಲವನ್ನೂ ಮೀರಿ ಆಚೆ ಇರುವ, ಪರಮಾತ್ಮನಾದ ನಿನಗೆ ನನ್ನ ಹಾಗೂ ನನಗೆ ನಿನ್ನ ನಮಸ್ಕಾರಗಳು.]

ಆದ್ದರಿಂದ, ಜನಸಾಮಾನ್ಯರ ವ್ಯವಹಾರದಲ್ಲಿ ಭಕ್ತಿ ಮತ್ತು ಜ್ಞಾನಗಳಲ್ಲಿ ಕಾಣುವ ಭೇದವು ಮೇಲುನೋಟಕ್ಕೆ ಮಾತ್ರ; ಇದನ್ನೇ ಶ್ರೀ ನೀಲಕಂಠ ದೀಕ್ಷಿತರು ತಮ್ಮ **ಆನಂದಸಾಗರಸ್ತವ** (23)ದಲ್ಲಿ ಈ ಮುಂದಿನಂತೆ ವರ್ಣಿಸಿದ್ದಾರೆ.

**आत्मा समस्तजगतां भक्तीति सम्यक्**
**विज्ञाय यद्वितनुते त्वयि भावबन्धम् ।**
**सा भक्तिरित्यभिमतं यदि सिद्धमिष्टं**
**व्यर्थं विशेष्यमलमस्तु विशेषणं नः ॥**

(ಆನಂದಸಾಗರಸ್ತವ 23)

['ಇಡೀ ಜಗತ್ತಿನ ನಿಜವಾದ ಆತ್ಮನೇ ನೀನು' ಎಂಬುದನ್ನು ಚೆನ್ನಾಗಿ ತಿಳಿದು, ನಿನಗಾಗಿ ಉಂಟಾದ ಪ್ರೀತಿಯೇ ನಿಜವಾದ ಭಕ್ತಿಯೆಂದಾದರೆ, ಆಗ, ವಿಶೇಷಣವು (ಜ್ಞಾನವು) ನಮಗೆ ಇಷ್ಟವಾದ್ದರಿಂದ ವಿಶೇಷ್ಯವು (ಭಕ್ತಿಯು)ವ್ಯರ್ಥವೇ ಸರಿ.]

ಹೀಗೆ ಜ್ಞಾನ,ಭಕ್ತಿಗಳ 'ತಿರುಳು' ಒಂದೇ ಆಗಿದ್ದರೂ, ವಿಭಿನ್ನ ಸಂದರ್ಭಗಳಲ್ಲಿ, ವಿಭಿನ್ನ ದೃಷ್ಟಿಕೋನಗಳನ್ನು ಆಶ್ರಯಿಸಿ, ಪರಾಭಕ್ತಿ ಹಾಗೂ ಜ್ಞಾನನಿಷ್ಠಾ ಎಂಬ ಶಬ್ದಗಳು ಪ್ರಯೋಗಿಸಲ್ಪಡುತ್ತವೆ. 'ಭಕ್ತಿ' ಎಂಬ ಪದವು ಆತ್ಮದ ಆನಂದ ಸ್ವರೂಪವನ್ನೂ ತತ್ಪರತೆಯನ್ನೂ ಸೂಚಿಸಿದರೆ, 'ಜ್ಞಾನ' ಎಂಬ ಪದವು ಅಜ್ಞಾನ ಅಥವಾ ಅವಿದ್ಯೆಯ ನಾಶವನ್ನೂ ಮತ್ತು ಆತ್ಮದ ಸಹಜಸಿದ್ಧ ಸ್ವಭಾವವಾದ 'ಸ್ಫುರಣ ಸ್ವರೂಪ'ವನ್ನೂ ಸೂಚಿಸುತ್ತದೆ. ಅಲ್ಲದೆ, 'ಪರಾಭಕ್ತಿ ಮತ್ತು ಅಖಂಡಾಕಾರವೃತ್ತಿಜ್ಞಾನ' ಎಂಬ ಈ ಅವಸ್ಥಾವಿಶೇಷವು ಜ್ಞಾನಿಗೆ ಸ್ವಾಭಾವಿಕವೇ ಆಗಿದೆ. ಅಲ್ಲದೆ, ಈ ಅವಸ್ಥಾ ವಿಶೇಷವು ಆತ್ಮಜ್ಞಾನಕ್ಕೆ ಸಾಧನಭೂತವಾದದ್ದು ಎಂಬುದನ್ನು ಈಗಾಗಲೇ ಸ್ಪಷ್ಟಪಡಿಸಲಾಗಿದೆ. ಅದೂ ಅಲ್ಲದೆ, ಭಗವದ್ಗೀತೆಯ ಕೊನೆಯ ಅಧ್ಯಾಯದ 55 ನೆಯ ಶ್ಲೋಕದಲ್ಲಿ (XVIII-55) ದೊರೆಯುವ 'ಜ್ಞಾನನಿಷ್ಠಾ' ಹಾಗೂ 'ಪರಾಭಕ್ತಿ' ಎಂಬ ಪದಗಳನ್ನು ತಮ್ಮ **ಗೀತಾಭಾಷ್ಯ**ದಲ್ಲಿ ಉಲ್ಲೇಖಿಸುತ್ತ, ಆಚಾರ್ಯಪಾದ ಶ್ರೀ ಶಂಕರರು ಆ ಶಬ್ದಗಳನ್ನು ಮುಂದಿನಂತೆ ವಿವರಿಸಿದ್ದಾರೆ.

सेयं ज्ञाननिष्ठा आर्तादिभक्तित्रयापेक्षया परा चतुर्थी भक्तिरित्युक्ता । तया परया भक्त्या भगवन्तं तत्त्वतोऽभिजानाति । यदनन्तरमेव ईश्वरक्षेत्रज्ञभेदबुद्धिः अशेषतो निवर्तते। .... .... प्रत्यगात्मविषयप्रत्ययसन्तानकरणाभिनिवेशश्च ज्ञाननिष्ठा ।

[ಆರ್ತ, ಜಿಜ್ಞಾಸು ಅರ್ಥಾರ್ಥೀ ಎಂಬ ಉಳಿದ ಮೂರು ವಿಧದ ಭಕ್ತಿಗಳಿಗೆ ಹೋಲಿಸಿದರೆ, ನಾಲ್ಕನೆಯ ವಿಧದ ಈ ಪರಾಭಕ್ತಿಯು, 'ಜ್ಞಾನನಿಷ್ಠೆ' ಎಂದೇ ಉಲ್ಲೇಖಿಸಲ್ಪಟ್ಟಿದೆ. (ಗೀತಾ 18-55 ರ ಶಾಂಕರಭಾಷ್ಯ ನೋಡಿ.) ಈ ಪರಾಭಕ್ತಿಯ ಮೂಲಕ ಸಾಧಕನು ಭಗವತ್ಸ್ವರೂಪವನ್ನು ಯಥಾವತ್ತಾಗಿ (ಇದ್ದದ್ದು ಇದ್ದಂತೆಯೇ) ತಿಳಿದುಕೊಳ್ಳುತ್ತಾನೆ. ನಂತರ, ಈಶ್ವರ ಹಾಗೂ ಕ್ಷೇತ್ರಜ್ಞರ ಮಧ್ಯದಲ್ಲಿರುವ ಭೇದಬುದ್ಧಿಯು, (ತನ್ನಷ್ಟಕ್ಕೆ ತಾನೇ) ನಿಃಶೇಷವಾಗಿ ಇಲ್ಲದಾಗುತ್ತದೆ. ಜ್ಞಾನನಿಷ್ಠೆ ಎಂಬುದು ಒಳಗಿನ ಆತ್ಮದ ವಿಷಯವಾದ ಪ್ರತ್ಯಯವನ್ನು ಒಂದೇ ಸಮನೆ ಬಿಟ್ಟೂ ಬಿಡದೆ ನಡೆಯಿಸುವದರಲ್ಲಿಯೇ ಇರುವ ಅಭಿನಿವೇಶವಾಗಿರುತ್ತದೆ.]

ಪರಾಭಕ್ತಿ ಅಥವಾ ಅಖಂಡಾಕಾರವೃತ್ತಿಜ್ಞಾನವನ್ನುಂಟುಮಾಡುವ 'ಸಾಧ್ಯ ಮತ್ತು ಸಾಧನ' ಎಂಬ ಮುಖಗಳಿಗೆ ಸಂಬಂಧಿಸಿದ ಎಲ್ಲವನ್ನೂ 'ತಸ್ಮೈ ಶ್ರೀ ಗುರುಮೂರ್ತಯೇ ನಮ ಇದಂ ಶ್ರೀ ದಕ್ಷಿಣಾಮೂರ್ತಯೇ' ಎಂಬ ಪಲ್ಲವಿಯು ಸೂಚಿಸುತ್ತದೆ.

## 1.6. 'ಶ್ರೀಗುರು' ಎಂಬ ಶಾಬ್ದಿಕ ಸಂಜ್ಞೆ

ಜೀವಾತ್ಮ ಪರಮಾತ್ಮರ ತಾದಾತ್ಮ್ಯಾನುಭವವು ಕೇವಲ ಶ್ರೀ ಗುರು-ಭಗವಂತನ ಅನುಗ್ರಹದಿಂದ ಮಾತ್ರ ಉದಯಿಸುತ್ತದೆ. ವಿವೇಕಚೂಡಾಮಣಿಯ ಈ ಮುಂದಿನ ಶ್ಲೋಕವು (518) ಅದನ್ನು ಸ್ಪಷ್ಟಪಡಿಸುತ್ತದೆ.

स्वाराज्यसाम्राज्यविभूतिरेषा
भवत्कृपाश्रीमहितप्रसादात् ।
प्राप्ता मया श्रीगुरवे महात्मने
नमो नमोऽस्तु पुनर्नमोऽस्तु ॥ (ವಿ.ಚೂ. 518)

[ಕೃಪಾಳುವಾದ ಶ್ರೀಗುರು-ಭಗವಂತನೇ! ಸ್ವಯಂಪ್ರಕಾಶ-ಸ್ವರೂಪವಾದ ಆತ್ಮಜ್ಯೋತಿಯ ಮಹಾ ಸಾಮ್ರಾಜ್ಯವನ್ನು (ಮೋಕ್ಷವನ್ನು) ನನಗೆ

ಕರುಣಿಸಿರುವಿ! (ಅದಕ್ಕಾಗಿ) ನಿನಗೆ ನಮಸ್ಕಾರಗಳು. ಮಹಾಮಹಿಮ ಸ್ವಾಮಿ! ನಿನಗೆ ಪುನಃಪುನಃ ನಮಸ್ಕಾರಗಳು!]

ಅಲ್ಲದೆ, **ಶತಶ್ಲೋಕಿ**ಯ ಪ್ರಾರಂಭಿಕ ಶ್ಲೋಕವು **स्वीयं साम्यं विधत्ते** ಎನ್ನುತ್ತ, 'ಅಪ್ರತಿಮನಾದ ಶ್ರೀ ಗುರು-ಭಗವಂತನು, ತನ್ನ ಶಿಷ್ಯನಿಗೆ ತನ್ನ ಉನ್ನತೋನ್ನತ ಸ್ಥಾನಮಾನವನ್ನೇ ದಯಪಾಲಿಸುತ್ತಾನೆ (ಅವನನ್ನೂ ತನ್ನಂತೆಯೇ ಮಾಡಿಕೊಳ್ಳುತ್ತಾನೆ.)' ಎಂದು ಉಗ್ಗಡಿಸುತ್ತದೆ. **यमेवैष वृणुते तेन लभ्यः** ಎಂಬ ಶ್ರುತಿಯು (ಕ.ಉ.1-2-23), 'ಸ್ವೀಯ-ಸಾಮ್ಯ' ಎಂಬ ಇಂಥ ವೈಭವೋಪೇತ ಪದವಿಯು ಕೇವಲ ಆಯ್ದ ಶಿಷ್ಯನಿಗೆ ಮಾತ್ರ ದೊರಕುತ್ತದೆ ಎಂದು ಉದ್ಘೋಷಿಸುತ್ತದೆ.

**ಅವಧೂತಗೀತೆ**ಯ ಈ ಮುಂದಿನ ಸುಪ್ರಸಿದ್ಧ ವಚನವು ಈ ಸಂದರ್ಭದಲ್ಲಿ ಸ್ಮರಣೀಯವಾಗಿದೆ.

**ईश्वरानुग्रहादेव पुंसामद्वैतकल्पना ।**

**महद्भयकृतत्राणात् द्वित्राणामुपजायते ॥** (ಅವಧೂತಗೀತೆ -1)

[ಮಹಾಭಯಂಕರವಾದ ಸಂಸಾರದಿಂದ ಪಾರುಮಾಡುವ ಅದ್ವೈತ ಸಾಕ್ಷಾತ್ಕಾರ ಸಂಬಂಧಿಯಾದ ಒಲವು, ಪರಮೇಶ್ವರನ ಅನುಗ್ರಹದಿಂದ ಮಾತ್ರವೇ ಮೂಡುತ್ತದೆ, ಅದು ಕೂಡ ಎಲ್ಲೋ ಒಬ್ಬಿಬ್ಬರಿಗೆ ಮಾತ್ರ.]

ಸಾಧಕನಿಗೆ ಎಷ್ಟೇ ಅಗಾಧವಾದ ವೈದುಷ್ಯವಿದ್ದರೂ, ಸಕಲಶಾಸ್ತ್ರಗಳ ಶಾಬ್ದಿಕ ಪ್ರಭುತ್ವವಿದ್ದರೂ, ಅಪ್ರತಿಹತ ತಾರ್ಕಿಕ ಕೌಶಲ್ಯವಿದ್ದರೂ, ಆಚಾರ್ಯರ ಅನುಗ್ರಹದ ಹೊರತು, ಈ ಮೇಲ್ಕಾಣಿಸಿದ ವೈದುಷ್ಯಾದಿಗಳು ಅವನ ಸಹಾಯಕ್ಕೆ ಬರಲಾರವು. ಕಠೋಪನಿಷತ್ತಿನ, **अनन्यप्रोक्ते गतिरत्र नास्ति** (ಕ.ಉ 1-2-8 ) ಎಂಬ ಹಾಗೂ **नैषा तर्केण मतिरापनीया प्रोक्ताऽन्येनैव सुज्ञानाय प्रेष्ठ** (ಕ.ಉ 1-2-9) ಎಂಬ ಮಂತ್ರಗಳು ಇದನ್ನೇ ಸ್ಪಷ್ಟಪಡಿಸುತ್ತವೆ. ವಾಸ್ತವಾಂಶವೇನೆಂದರೆ, ಛಾಂದೋಗ್ಯ ಶ್ರುತಿಯು, (6-14-2) ಕಣ್ಣುಕಟ್ಟಿ ದಟ್ಟಡವಿಯಲ್ಲಿ ಬಿಡಲ್ಪಟ್ಟು, ದಾರಿತಪ್ಪಿಸಿಕೊಂಡು ಒದ್ದಾಡುವ ವ್ಯಕ್ತಿಗೆ, ಸಾಧಕನನ್ನು ಹೋಲಿಸುತ್ತದೆ. ಮತ್ತು, ಅಂಥವನು ಆ ದಟ್ಟಕಾಡಿನಿಂದ (ಸಂಸಾರವೆಂಬ ದಟ್ಟಡವಿಯಿಂದ) ಪಾರಾಗಿ ಸರಿಯಾದ ಮಾರ್ಗವನ್ನು ಹಿಡಿಯಲು (ಮೋಕ್ಷಮಾರ್ಗವನ್ನು ಹಿಡಿಯಲು) ಅವನಿಗೆ ಕೃಪಾಳುವಾದ,

ಸಮರ್ಥನಾದ ಆಚಾರ್ಯನ ಮಾರ್ಗದರ್ಶನವೇ ಬೇಕು ಎನ್ನುತ್ತದೆ, आचार्यवान् पुरुषो वेद ಎಂಬ ಮಂತ್ರದ ಮೂಲಕ.]

## 1.7 ಈಶ್ವರ ಗುರು ಆತ್ಮ ಎಲ್ಲವೂ ಒಂದೇ!

ಅನೇಕ ಜನ್ಮಗಳಲ್ಲಿ ವಿಧಿವತ್ತಾಗಿಯೂ, ನಿಶ್ಚಲವಾದ, ಸ್ವಲ್ಪವೂ ಸಂಶಯ ವಿಕಲ್ಪಗಳಿಲ್ಲದ ಭಕ್ತಿಯಿಂದ ಪೂಜಿಸಿದರೆ, ಭಗವಂತನು ನಿಶ್ಚಿತವಾಗಿ ಮನುಷ್ಯದೇಹವನ್ನು ತಾಳಿ, ಅಪಾರಕರುಣೆಯಿಂದ ಗುರುರೂಪದಲ್ಲಿ ತೋರಿಕೊಳ್ಳುತ್ತಾನೆ. ಹಾಗೂ ಶಿಷ್ಯನಿಂದ ಸೇವೆ ಶುಶ್ರೂಷೆಗಳನ್ನು ಸ್ವೀಕರಿಸಿ, ಅವನಲ್ಲಿ ಆಧ್ಯಾತ್ಮಿಕ ವಿಚಾರಗಳನ್ನು ಪ್ರಚೋದಿಸುತ್ತಾನೆ. ಇದರಿಂದ ಸಾಧಕ-ಶಿಷ್ಯನು ಅತ್ಯಂತ ಭಯಂಕರವಾದ, ಕಂಟಕಾಕೀರ್ಣವಾದ ಸಂಸಾರಸಾಗರವನ್ನು ದಾಟುತ್ತಾನೆ. ಇದನ್ನೇ ಮುಂದಿನ ಶ್ಲೋಕವು ಹೇಳುತ್ತದೆ.

जन्मानेकशतैः सदादरयुजा भक्त्या समाराधितः
भक्तैर्वैदिकलक्षणेन विधिना सन्तुष्ट ईशः स्वयम् ।
साक्षाच्छ्रीगुरुरूपमेत्य कृपया दृग्गोचरस्सन् प्रभुः
तत्त्वं साधु विशोध्य तारयति तान् संसार दुःखार्णवात् ॥

(ಸರ್ವವೇದಾಂತ ಸಿದ್ಧಾಂತಸಾರಸಂಗ್ರಹ--255)

ನಮ್ಮೆಲ್ಲ ಆಧ್ಯಾತ್ಮಿಕ ಸಾಧನೆಗಳೂ, ಶ್ರೀ ಗುರುಭಗವಂತನ ಕೃಪೆಯನ್ನು ಹೊತ್ತುತರುವ ಯಾನಗಳೇ ಆಗಬೇಕು. ಇಲ್ಲವಾದರೆ, ಆ ಎಲ್ಲ ಸಾಧನೆಗಳೂ ವ್ಯರ್ಥವೇ ಸರಿ. ಶ್ರೀ ಭಗವಂತನ ಕೃಪೆಯಿಲ್ಲದಿದ್ದರೆ ಸದ್ಗುರುವನ್ನಾಗಲಿ ಸಚ್ಛಾಸ್ತ್ರವನ್ನಾಗಲಿ ಸಮೀಪಿಸಲು ಕೂಡ ಸಾಧ್ಯವಾಗುವದಿಲ್ಲ.

यावन्नानुग्रहः साक्षाज्जायते परमेश्वरात् ।
तावन्न सद्गुरुं कश्चित् सच्छास्त्रमपि विन्दति ॥

[ಎಲ್ಲಿಯ ವರೆಗೆ ಪರಮಶ್ವರನ ಸಾಕ್ಷಾತ್ ಅನುಗ್ರಹವು ಪ್ರಾಪ್ತವಾಗುವದಿಲ್ಲವೋ ಅಲ್ಲಿಯ ವರೆಗೆ ಸಚ್ಛಾಸ್ತ್ರದಲ್ಲಿ ಗತಿಯೂ ದೊರಕದು; ಸದ್ಗುರುವೂ ದೊರಕನು.]

ಶ್ರೀ ಗುರುಭಗವಂತನ ಅನುಗ್ರಹದಿಂದ ಮಾತ್ರ ಸಾಧಕನಿಗೆ 'ಸರ್ವಾತ್ಮತ್ವಮಹಾವಿಭೂತಿ'ಯು ಸಿದ್ಧಿಸುತ್ತದೆ. ಈ ಅನುಗ್ರಹವು ಎಲ್ಲರಿಗೂ ದೊರಕಬೇಕೆಂಬುದೇ ಶ್ರೀಆಚಾರ್ಯಪಾದರ ಸದಾಶಯ.

ಭಕ್ತಿಜ್ಞಾನಭಾವಪೂರಿತವಾದ ಈ ಶ್ರೀ ದಕ್ಷಿಣಾಮೂರ್ತಿ ಸ್ತೋತ್ರವನ್ನು ಅರ್ಥಾನುಸಂಧಾನಪೂರ್ವಕವಾಗಿ ಭಾವಪೂರ್ಣವಾಗಿ ಹೇಳಿಕೊಳ್ಳುತ್ತ ಉದ್ಧಾರವಾಗಬೇಕೆಂದೇ ಭಗವಂತನು ಶ್ರೀಗುರುವಿನ ಮೂಲಕ ಈ ಸ್ತೋತ್ರವನ್ನು ನಮಗೆ ಕರುಣಿಸಿದ್ದಾನೆ. `ನಾನೊಂದು ಪ್ರತ್ಯೇಕಜೀವ' ಎಂಬ ಅಜ್ಞಾನವನ್ನು ತೊಡೆದುಹಾಕಿ, ಸರ್ವಾತ್ಮತ್ವಭಾವವನ್ನೂ, ಶ್ರೀ ಗುರುಭಗವಂತನೊಡನೆ ತಾದಾತ್ಮ್ಯ ಭಾವವನ್ನೂ ಕರುಣಿಸಲು ಶ್ರೀಗುರುವು ನಮಗೆ ಈ ಸ್ತೋತ್ರರತ್ನವನ್ನು ಅನುಗ್ರಹಿಸಿದ್ದಾರೆ. ಆದ್ದರಿಂದಲೇ **तस्मै श्रीगुरुमूर्तये नम इदं श्रीदक्षिणामूर्तये** ಎಂಬ ಪಲ್ಲವಿಯು ಸಾರ್ಥಕ್ಯವನ್ನು ಕಂಡಿದೆ.

ಶ್ರೀ ಗುರುವಿಗೆ ವಾಙ್ಮಾನಸ ಪೂಜೆಯನ್ನು ಸಲ್ಲಿಸುವದು ಹಾಗೂ ಅವರಿಗೆ ಕೃತಜ್ಞತಾಪೂರ್ವಕ ಗೌರವಾರ್ಪಣೆ ಮಾಡುವದೇ ಈ ಸ್ತೋತ್ರದ ತಾತ್ಪರ್ಯ. ಈ ಸ್ತೋತ್ರದ ಪಲ್ಲವಿಯಲ್ಲಿ ಬರುವ ಪುನರುಕ್ತಿಯಿಂದ ತಿಳಿದುಬರುವಂತೆ ಶ್ರೀ ಗುರುವು ಸಾಕ್ಷಾತ್ ಶ್ರೀ ದಕ್ಷಿಣಾಮೂರ್ತಿಯೇ ಹೌದು. ಈ ಸ್ತೋತ್ರದ ಅಧ್ಯಯನದಿಂದ ತಿಳಿದುಬರುವಂತೆ, ಈ ಸ್ತೋತ್ರದ ಬೇರೆಬೇರೆ ಶ್ಲೋಕಗಳಲ್ಲಿ ಶ್ರೀ ಗುರುವಿನ ವಿವಿಧ ವಿಭೂತಿಮಚ್ಛಕ್ತಿಗಳ ವರ್ಣನೆಯಿದೆ. ಶ್ರೀಗುರುವು ತನ್ನ ಆತ್ಮದಲ್ಲಿ ತನ್ನನ್ನು ತಾನೇ ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಅವನೇ ಈಶ್ವರ; ಅವನೇ ಮಾಯೀ; ಅವನೇ ಜಗತ್ತಿನ ಸ್ರಷ್ಟಾ; ಅವನೇ ವಾಕ್ಯೋಪದೇಷ್ಟಾ, ಅವನೇ ಸ್ವಯಂಜ್ಯೋತಿಃಸ್ವರೂಪನಾದ ಅಧಿಷ್ಠಾನವಾಗಿದ್ದಾನೆ; ಅವನಿಂದಲೇ ಈ ಜಗತ್ತು ಹಾಗೂ ಅದರಲ್ಲಿಯ ವಿವಿಧ ವಸ್ತುಗಳು ಅಸ್ತಿತ್ವವನ್ನು ಪಡೆಯುತ್ತವೆ ಹಾಗೂ ನಮ್ಮ ಅರಿವಿಗೆ ಬರುತ್ತವೆ. ಸಾಧಕರಿಗೆ ವಿವಿಧಸಿದ್ಧಿಗಳ ರೂಪದಲ್ಲಿ ಫಲವನ್ನು ಕೊಡುವವನೂ (ಕರ್ಮಾಧ್ಯಕ್ಷ) ಅವನೇ; ಕೊನೆಗೆ 'ಸರ್ವಾತ್ಮತ್ವಮಹಾವಿಭೂತಿ' ಯನ್ನೂ ಕೂಡ ದಯಪಾಲಿಸುವವನೂ ಅವನೇ; ಇವೆಲ್ಲ ಶ್ರೀ ಗುರುವಿನ ವಿಭೂತಿ-ವಿಶೇಷಗಳು. ವಾಸ್ತವಾಂಶವೇನೆಂದರೆ; ಇದೇ ಸ್ತೋತ್ರದ ೯ ನೆಯ ಶ್ಲೋಕದಲ್ಲಿ ದೃಢೀಕರಿಸಿದಂತೆ, ಈ ಇಡೀ ವಿಶ್ವವೇ ಅವನ ಅಷ್ಟಮೂರ್ತಿ ಸ್ವರೂಪವಾಗಿದೆ. ಚೆನ್ನಾಗಿ ವಿಮರ್ಶೆಮಾಡಿ ನೋಡಿದರೆ, ಸರ್ವವ್ಯಾಪಿಯಾದ, ಸರ್ವಾತೀತವಾದ ಬ್ರಹ್ಮ-ಈಶ್ವರನಿಗಿಂತ ಭಿನ್ನವಾದ ಮತ್ತೊಂದು ತತ್ತ್ವವೇ ಇಲ್ಲ.

ಮೂರನೆಯ ಶ್ಲೋಕವು ವಿಶದಪಡಿಸುವಂತೆ, ಮತ್ತು ಈಗಾಗಲೇ ನಿವೇದಿಸಿದಂತೆ, ಜೀವರ ಮೇಲಿನ ಕರುಣೆಯಿಂದ ಮತ್ತು ಸಾಧಕಾನುಗ್ರಹಾರ್ಥವಾಗಿ, ತನ್ನ ಮಾಯೆಯ ಮೂಲಕ ಈಶ್ವರನು 'ಶ್ರೀ

ಗುರು'ಎಂಬ ಮಾನವರೂಪ ಧಾರಣಮಾಡುತ್ತಾನೆ. ಇದನ್ನೇ ಶ್ರೀ ಆಚಾರ್ಯಪಾದರು, ತಮ್ಮ **ಸೂತ್ರಭಾಷ್ಯ** 1-1-7-20 ರಲ್ಲಿ **स्यात्परमेश्वरस्यापि इच्छावशात् मायामयं रूपं साधकानुग्रहार्थम्** ಎಂದು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಶ್ರುತಿಯು ಕೂಡ (ಮುಂಡಕೋಪನಿಷತ್ತು-3-2-9) **ब्रह्म वेद ब्रह्मैव भवति** (ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗುತ್ತಾನೆ.) ಎಂದು ಉದ್ಘೋಷಿಸಿದೆ. **ಉದ್ಧವಗೀತೆ**ಯಲ್ಲಿ ಭಗವಾನ್ ಶ್ರೀ ಕೃಷ್ಣನು **आचार्यं मां विजानीयात्** (ನಾನೇ ಆಚಾರ್ಯನೆಂದು ತಿಳಿ) ಎಂದು ನಿಶ್ಚಿತವಾಗಿ ಹೇಳಿದ್ದಾನೆ. 'ಆತ್ಮನೋ ಗುರುರಾತ್ಮೈವ' (ತನ್ನ ಆತ್ಮವೇ ತನಗೆ ಗುರುವು) ಎಂಬುದು ಕೂಡ ಆರ್ಷೋಪದೇಶವೇ ಆಗಿದೆ. ಆದ್ದರಿಂದ ಈಗಾಗಲೇ ಹೇಳಿದಂತೆ, ಪ್ರತಿಯೊಬ್ಬ ಶ್ರದ್ಧಾಳು ಸಾಧಕನು ಕೂಡ, ಸರಿಯಾದ ಆಧ್ಯಾತ್ಮಿಕ ಒಲವನ್ನು ಬೆಳೆಸಿಕೊಳ್ಳಲು, ಪರಮೇಶ್ವರ, ಗುರು ಹಾಗೂ ತನ್ನ ಆತ್ಮ ಈ ಮೂರೂ ತತ್ತ್ವಗಳು 'ಅಭಿನ್ನ' ಎಂದೇ ಭಾವಿಸಬೇಕಾಗುತ್ತದೆ.

**ತತ್ತ್ವಸುಧಾವ್ಯಾಖ್ಯಾ** ಈ ವಿಷಯದಲ್ಲಿ ಮುಂದಿನ ನಿಲುವನ್ನು ತಾಳಿದೆ.

**परमाद्वैतविज्ञानं कृपया वै ददाति यः ।**

**सोऽयं गुरुर्गुरुस्साक्षाच्छिव एव न संशयः ॥**

[ಮಹಾವಾಕ್ಯದ ಪರಮತಾತ್ಪರ್ಯವಾದ, ಉತ್ಕೃಷ್ಟತಮವಾದ ಅದ್ವೈತ ವಿಜ್ಞಾನವನ್ನು (ಅನುಭವಾವಸಾನವಾದ ಅದ್ವೈತ ತತ್ತ್ವವನ್ನು) ಯಾರು ಅಸೀಮಕೃಪೆಯಿಂದ ನೀಡುವರೋ ಆ ಗುರುವೇ 'ಶಿವ' (ದಕ್ಷಿಣಾಮೂರ್ತಿ) ಎಂಬ ಗುರುವರನು. ಇದರಲ್ಲಿ ಸಂಶಯವೇ ಇಲ್ಲ.]

**ಶಿವತತ್ತ್ವಸುಧಾನಿಧಿ**ಯು ಮುಂದಿನಂತೆ ಉದ್ಘೋಷಿಸಿದೆ.

**महावाक्यार्थदो यस्तु स गुरुः परमः शिवः ।**

**तत्त्वोपदेष्टुरधिको न गुरुः स हि शङ्करः ॥**

['ಯಾರು ಮಹಾವಾಕ್ಯವನ್ನು ಉಪದೇಶ ಮಾಡುತ್ತಾರೋ, ಆ ಗುರುವು ಸಾಕ್ಷಾತ್ ಪರಶಿವನೇ ಸರಿ. ತತ್ತ್ವೋಪದೇಶ ಮಾಡುವ ಗುರುವಿಗಿಂತ ಯಾರೂ ದೊಡ್ಡವರಲ್ಲ. ಅವನು ಸಾಕ್ಷಾತ್ ಶಂಕರನೇ!']

ಶ್ರೀ ಶ್ರೀ ಚಂದ್ರಶೇಖರಭಾರತೀ ಸ್ವಾಮಿ ಪೂಜ್ಯಪಾದರು ತಮ್ಮ **ವಿವೇಕಚೂಡಾಮಣಿ**ಯ ವ್ಯಾಖ್ಯಾನವನ್ನು ಈ ಮುಂದಿನ ಮಂಗಲಶ್ಲೋಕದಿಂದ ಪ್ರಾರಂಭಿಸಿದ್ದಾರೆ.

संसारसागरनिमग्नजनोद्दिधीर्षुः
योऽवतारच्छिवनृसिंहगुरुच्छलेन ।
जाड्यान्धकारहरनं करुणासमुद्रम्
तं दक्षिणास्यमनिशं हृदि भावयामि ॥

['ಅವಿದ್ಯೆಯೆಂಬ ಅಂಧತಮಸ್ಸನ್ನು ನಾಶಮಾಡುವ, ಸಂಸಾರಸಾಗರದಲ್ಲಿ ಮುಳುಗಿ ಮುಳುಗಿ ಸಾಯುತ್ತಿರುವ ಜನರನ್ನು ಉದ್ಧರಿಸುವ ಸಲುವಾಗಿ, ಕೃಪಾಸಾಗರರಾದ ಶಿವನೃಸಿಂಹ ಗುರುವಿನ (ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳ) ರೂಪದಲ್ಲಿ ಧರೆಯ ಮೇಲೆ ಅವತರಿಸಿ ಬಂದ, ಶ್ರೀ ದಕ್ಷಿಣಾಮೂರ್ತಿಯನ್ನು ನನ್ನ ಹೃದಯಕುಹರದಲ್ಲಿ ನಾನು ನಿರಂತರವಾಗಿ ಧ್ಯಾನಿಸುತ್ತ, ಪೂಜಿಸುತ್ತೇನೆ.]

ಶ್ರೀ ಶ್ರೀ ತೋಟಕಾಚಾರ್ಯಪಾದರು -

भव एव भवानिति मे नितरां
समजायत चेतसि कौतुकिता ।
मम वारय मोहमहाजलधिं
भव शङ्करदेशिक मे शरणम् ॥

['ಶಂಕರ ಗುರೋ! ತಾವು ಸಾಕ್ಷಾತ್ ಭವನೇ! (ಶಿವನೇ!) ಎಂಬ ವಾಸ್ತವವು ನನ್ನಲ್ಲಿ ವಿಸ್ಮಯದೊಂದಿಗೆ ಅತುಲ ಹರ್ಷವನ್ನೂ ಉಂಟುಮಾಡಿದೆ. ನನಗೆ ತಮ್ಮ ಚರಣಗಳಲ್ಲಿ ಶರಣು ಕೊಡಿ. ಮೋಹವೆಂಬ ಮಹಾ ಸಮುದ್ರದಿಂದ ನನ್ನನ್ನು ಪಾರುಮಾಡಿ.'] ಎಂದು ಬೇಡಿದ್ದಾರೆ.

ಶ್ರೀ ಸುರೇಶ್ವರಾಚಾರ್ಯಪಾದರು ತಮ್ಮ **ನೈಷ್ಕಮ್ಯಸಿದ್ಧಿಯ** 1-1 ನೆಯ ಶ್ಲೋಕದಲ್ಲಿ,

खानिलाग्न्यब्धरित्र्यन्तं स्रक्फणीवोद्गतं यतः ।
ध्वान्तच्छिदे नमस्तस्मै हरये बुद्धिसाक्षिणे ॥

[ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ ಎಂಬ ಈ ಐದೂ ಮಹಾಭೂತಗಳೂ, ಅಧ್ಯಾಸಸಮಕಾಲದಲ್ಲಿ ಪುಷ್ಪಮಾಲೆಯಲ್ಲಿ ಸರ್ಪವು ಕಾಣಿಸಿಕೊಳ್ಳುವಂತೆ, (ಅವಿದ್ಯೆಯಿಂದ) ಯಾರಿಂದೆದ್ದುಬರುತ್ತವೆಯೋ, ಬುದ್ಧಿಸಾಕ್ಷಿಯಾದಂಥ ಅಜ್ಞಾನವನ್ನು ಕಳೆಯುವಂಥ, ಅಂಥ ಶ್ರೀ ಹರಿಗೆ ನಮಸ್ಕಾರಗಳು.]

ಹಾಗೆಯೇ, **ಮಾನಸೋಲ್ಲಾಸದಲ್ಲಿ** (I-30) ಶ್ರೀ ಸುರೇಶ್ವರಾಚಾರ್ಯಪಾದರು ಮುಂದಿನಂತೆ ಹೇಳಿದ್ದಾರೆ.

ईश्वरो गुरुरात्मेति मूर्तिभेदाद्विभागिने ।
व्योमवद् व्याप्तदेहाय दक्षिणामूर्तये नमः ॥ (I-30)

[ಈಶ್ವರ ಗುರು ಹಾಗೂ ಆತ್ಮ ಎಂಬ ಮೂರು ಬೇರೆಬೇರೆ ರೂಪಗಳಲ್ಲಿ ಪ್ರಕಟವಾಗುವ, ಆಕಾಶದಂತೆ ಎಲ್ಲವನ್ನೂ ವ್ಯಾಪಸಿದ ದೇಹವುಳ್ಳ, ಶ್ರೀ ದಕ್ಷಿಣಾಮೂರ್ತಿ ದೇವನಿಗೆ ನಮಸ್ಕಾರಗಳು.]

ಇದರಿಂದ, ಈಶ್ವರ ಗುರು ಹಾಗೂ ಆತ್ಮ ಈ ಮೂರೂ ಒಂದೇ ತತ್ತ್ವದ ಮೂರುಮುಖಗಳು ಎಂಬ ಸಿದ್ಧಾಂತವನ್ನೇ ಮೂಲಹಂದರ-ವನ್ನಾಗಿರಿಸಿಕೊಂಡು ಇಡೀ **ದಕ್ಷಿಣಾಮೂರ್ತಿಸ್ತೋತ್ರ**ವು ಹೆಣೆಯಲ್ಪಟ್ಟಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಇದೇ ಈ ಇಡೀ ಸ್ತೋತ್ರದ ಹಾರ್ದ, ಪ್ರಧಾನಾಶಯ. **तस्मै श्रीगुरुमूर्तये नम इदं श्रीदक्षिणामूर्तये।** ಎಂಬ ಈ ಸ್ತೋತ್ರದ ಪಲ್ಲವಿಯ ಪಂಕ್ತಿಗಳು ಇದನ್ನು ಸ್ಪಷ್ಟಪಡಿಸುತ್ತವೆ. **ಮಾನಸೋಲ್ಲಾಸ** ವ್ಯಾಖ್ಯಾನದ ಪ್ರಕಾರ ಈ ಪಲ್ಲವಿಯ ಅರ್ಥವು ಈ ಮುಂದಿನಂತಿದೆ.

श्रीगुरुः - **श्रीः** तत्त्वबोधात्मिका आविष्कृता शोभा अस्मिन्नस्तीति श्रीमान् । ... श्रीमांश्चासौ गुरुश्च तस्य मूर्तिरिव मूर्तिर्यस्य सः...। अनेन स्वोपदेष्टृगुर्वात्मना चास्य ध्येयत्वं विवक्षितम्।

[ಅನುವಾದ: ಶ್ರೀ ಎಂದರೆ ಶೋಭೆ. ತತ್ತ್ವವನ್ನು ಬೋಧಿಸುವ ಶೋಭೆ-ದೀಪ್ತಿ-ಕಾಂತಿಯೇ ಈ 'ಶ್ರೀ' ಎಂಬುದು. ಅದು ಗುರುವಿನಲ್ಲಿ ಇರುವದರಿಂದ ಶ್ರೀ ಗುರುವು ಶ್ರೀಃ ಎಂದು ಸಂಬೋಧಿಸಲ್ಪಟ್ಟಿದ್ದಾರೆ. ಅಂಥ `ಶ್ರೀ' ಯೂ ಅವರೇ 'ಗುರು'ವೂ ಅವರೇ ಆದ್ದರಿಂದ, ಅವರು `ಶ್ರೀಗುರುವು.' ಶ್ರೀ ಗುರುವು ವಾಸ್ತವವಾಗಿ ಅಮೂರ್ತಿ ಯಾದರೂ ಮೂರ್ತಿಯಂತಿರುವದರಿಂದ ಅವರು ಶ್ರೀ ಗುರುಮೂರ್ತಿಯು. 'ತಮಗೆ ಉಪದೇಶಮಾಡಿದ ಗುರುವಿನ ರೂಪದಿಂದಲೇ ಶ್ರೀ ಗುರುವನ್ನು ಧ್ಯಾನಿಸಬೇಕು' ಎಂಬುದು ಇದರಿಂದ ಸ್ಪಷ್ಟಪಡುತ್ತದೆ. [ಮನುಷ್ಯರೂಪದ ನಮ್ಮ ಗುರುವು ಶ್ರೀ ದಕ್ಷಿಣಾಮೂರ್ತಿಯೇ ಎಂದು ಭಾವಿಸಬೇಕು ಎಂಬುದು ಈ ಶ್ಲೋಕದ ಒಟ್ಟು ತಾತ್ಪರ್ಯ.]]

**ತತ್ತ್ವಸುಧಾ** ವ್ಯಾಖ್ಯದ ಪ್ರಕಾರ ಶ್ರೀಗುರು ಎಂಬ ಶಬ್ದದ ನಿರ್ವಚನವು ಹೀಗಿದೆ - **साक्षात्कृतब्रह्मतत्त्वतया त्रिविधपरिच्छेदशून्यो ज्ञानोपदेष्टा पुरुषः तन्मूर्तये तद्रूपेणावस्थिताय ।**

[ಬ್ರಹ್ಮತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡ, ದೇಶಕಾಲನಿಮಿತ್ತಗಳೆಂಬ ಮೂರುವಿಧದ ಪರಿಚ್ಛೇದಗಳೂ [ಸೀಮಿತ ಪರಿಮಾಣಗಳೂ] ಇಲ್ಲದ, ಜ್ಞಾನೋಪದೇಶ ಮಾಡುವ ಪುರುಷನೆಂದರ್ಥ. ಅವನ ಮೂರ್ತಿಯು ಎಂದರೆ ಆ ರೂಪದಿಂದ ಇದ್ದುಕೊಂಡವನು ಎಂದರ್ಥ.]

**ವಿವೇಕಚೂಡಾಮಣಿ** (52) ವ್ಯಾಖ್ಯಾಪ್ರಕಾರ:-

श्रीयुतश्चासौ गुरुश्च श्रीगुरुः 'ऋचस्सामानि यजूंषि सा हि श्रीरमृता सताम्' इति श्रुत्या ऋगादीनां शब्दरूपाणामेव अमृतसम्पद्रूपत्वे सकलवेदान्तान् तत्प्रतिपाद्यमर्थं च साक्षात्कृतवतो गुरोः श्रीमत्त्वे किं वक्तव्यम् ? सूर्यादिसकलतेजोभानहेतुभूतब्रह्मतेजसा सम्पन्न इत्यर्थः । तादृशः शिष्यान्तरान्धकारनिरोधकः **श्रीगुरुः** तन्मूर्तये ।

'ಋಗ್ಯಜುಃಸಾಮವೇದಗಳೇ 'ಶ್ರೀಃ' ಎಂಬ ಶಬ್ದದಿಂದ ಸೂಚಿತವಾಗಿವೆ. ಅವೇ ಸಜ್ಜನರ ಶ್ರೀಯಾಗಿವೆ (ಸಂಪತ್ತಾಗಿವೆ) ಎಂಬ ಶ್ರುತಿಗನುಸಾರವಾಗಿ ಕೇವಲ ಶಬ್ದರೂಪವಾದ ಋಗ್ವೇದಾದಿಗಳಿಗೇನೇ ಅಮೃತತ್ತ್ವ ಹಾಗೂ ಸಂಪತ್ತುಗಳು ಸಿದ್ಧವಿದ್ದಾಗ, ಸಕಲವೇದಾಂತಗಳನ್ನೂ (ಉಪನಿಷತ್ತುಗಳನ್ನೂ) ಅವುಗಳಿಂದ ಪ್ರತಿಪಾದ್ಯವಾದ ಅರ್ಥವನ್ನೂ (ಪರಬ್ರಹ್ಮವನ್ನೂ) ಸಾಕ್ಷಾತ್ಕರಿಸಿಕೊಂಡ ಶ್ರೀ ಗುರುವು ಶ್ರೀ ಶಬ್ದವಾಚ್ಯನಾಗಿದ್ದರೆ ಹೇಳುವದೇನು? ಸೂರ್ಯಚಂದ್ರಾದಿ ಸಕಲ ತೇಜಃಕಾಯಗಳಿಗೆ ಮೂಲತೇಜಸ್ಸನ್ನು ಪ್ರದಾನಮಾಡುವ ಬ್ರಹ್ಮತೇಜಸ್ಸಿನಿಂದ ಯುಕ್ತನಾದವನು ಶ್ರೀ ಗುರುವು ಎಂದರ್ಥ. ಶಿಷ್ಯರ ಅಂತರಂಗದಲ್ಲಿರುವ ಅಂಧಕಾರ (ಅಜ್ಞಾನ) ವನ್ನು ತೊಡೆದುಹಾಕುವನು ಶ್ರೀ ಗುರುವು. ಅವನ ಮೂರ್ತಿಯೇ ಶ್ರೀ ಗುರುಮೂರ್ತಿ ಎಂದರ್ಥ. ಈ ಸಂದರ್ಭದಲ್ಲಿ ಶ್ರುತಿಯು ಹೇಳುವ **ಪ್ರಜ್ಞಾನಘನ** (ಪ್ರಜ್ಞಾನಘನ ಏವ=ಆತ್ಮತತ್ತ್ವವು ಜ್ಞಾನದ ಗಟ್ಟಿಯೇ ಆಗಿದೆ) ಎಂಬುದು ಹಾಗೂ ಗೀತೆಯ

यदादित्यगतं तेजो जगद्भासयतेऽखिलम्।

यच्चन्द्रमसि यच्चाग्नौ तत्तेजो विद्धि मामकम् ॥ (XV-12)

ಎಂಬುದು ಹಾಗೂ **ಗುರುಗೀತೆಯ**-

गुकारश्चान्धकारो हि रुकारस्तेज उच्यते ।

अज्ञानग्रासकं ब्रह्म गुरुरेव न संशयः ॥

- ವನ್ನು ಇಲ್ಲಿ ಸ್ಮರಿಸಬಹುದು. ದಕ್ಷಿಣಾಮೂರ್ತಿಸ್ತೋತ್ರದಲ್ಲಿಯ (5ನೆಯ ಶ್ಲೋಕ 3 ನೆಯ ಸಾಲು) 'ವ್ಯಾಮೋಹ ಸಂಹಾರಿಣೇ' ಎಂಬ ಪದವು ಇದೇ ಭಾವದ ದ್ಯೋತಕವಾಗಿದೆ. ಆದ್ದರಿಂದ ಪ್ರಕಾಶ ಅಥವಾ ಸ್ಫುರಣವೇ ಶ್ರೀ ಗುರುವಿನ ಸ್ವರೂಪವಾಗಿದೆ ಎಂಬುದು ಸ್ಪಷ್ಟವಾಗಿದೆ. ಇದೇ ಭಾವವು **यस्यैव स्फुरणं सदात्मकमसत्कल्पार्थगं भासते** ಎಂಬ ಮೂರನೆಯ ಶ್ಲೋಕದಲ್ಲಿ ಅಭಿವ್ಯಕ್ತವಾಗಿದೆ. ಹಾಗೂ ಅದರ ಮುಂದಿನ ಶ್ಲೋಕದಲ್ಲಿಯ--**जानामीति तमेव भान्तमनुभात्येतत्समस्तं जगत्** ಎಂಬಲ್ಲಿ ವಿವರಿಸಲ್ಪಟ್ಟಿದೆ. ಇದು **तमेव भान्तमनुभाति सर्वं तस्य भासा सर्वमिदं विभाति** (ಮುಂ.ಉ. 2-2-11) ಎಂಬ ಶ್ರುತಿಗೆ ಅನುಗುಣವಾಗಿದೆ.

ಸ್ವಯಂಜ್ಯೋತಿಃಸ್ವರೂಪರಾದ ಶ್ರೀಗುರುವು ಸಾಧಕ-ಶಿಷ್ಯನ ಅಂತರಂಗದಲ್ಲಿ ಪ್ರಕಾಶಿಸುತ್ತಾರಲ್ಲದೇ ಬಹಿರಂಗದಲ್ಲಿಯೂ ಮನುಷ್ಯರೂಪದಿಂದ ಶಿಷ್ಯನಿಗೆ ಉಪದೇಶಮಾಡುತ್ತಾರೆ. ಇಂತಹ ಉಪದೇಶದ ಅಂತ್ಯದಲ್ಲಿ ಬೋಧನೆಯ ಶಿಖರವೆನಿಸಿದ ಮಹಾವಾಕ್ಯದ ಬೋಧನೆಯಾಗುತ್ತದೆ. ಇದು **साक्षात्तत्त्वमसीति वेदवचसा यो बोधयत्याश्रितान्** ಎಂಬುದರಿಂದ ವಿದಿತವಾಗುತ್ತದೆ. ಇಲ್ಲಿ ಒಂದು ಮಾತನ್ನು ನೆನಪಿಡಬೇಕು. ಪದಾರ್ಥಶೋಧನೆಯಲ್ಲಿಯೇ ಆಗಲಿ, ಅಥವಾ ವಾಕ್ಯಾರ್ಥ ವಿಚಾರಣೆಯಲ್ಲಿಯೇ ಆಗಲಿ, ಬಳಸಿದ ಶಬ್ದಗಳು ಅಥವಾ ವಾಕ್ಯಗಳು, ಶಿಷ್ಯನ ಅಜ್ಞಾನವನ್ನು, ಅವಿದ್ಯೆಯನ್ನು ಕಳೆಯಲು ಮಾತ್ರ ಸಾಕಾಗಬಲ್ಲವೇ ಹೊರತು, ಆತ್ಮಸಾಕ್ಷಾತ್ಕಾರ ಮಾಡಿಸಲು ಈ ಸಾಧನಗಳು ಸಮರ್ಥವಾಗಲಾರವು.

यतो वाचो निवर्तन्ते अप्राप्य मनसा सह ।

(ಮನಸ್ಸನ್ನೂ ಒಳಗೊಂಡಂತೆ ವಾಕ್ಕು ಎಲ್ಲಿಂದ ತಿರುಗಿ ಬರುತ್ತದೆಯೋ) ಎಂಬ ಶ್ರುತಿಯು (ತೈತ್ತಿರೀಯ ಉಪನಿಷತ್ 2-4-1 ಮತ್ತು 2-9-1) ಅತ್ಯಂತ ಸ್ಪಷ್ಟಶಬ್ದಗಳಲ್ಲಿ, 'ಮಾತುಗಳು ಅದನ್ನು (ಆತ್ಮತತ್ತ್ವವನ್ನು) ಮುಟ್ಟಲಾರದೆ ಮನಸ್ಸಿನೊಂದಿಗೆ ಹಿಂದಿರುಗಿ ಬರುತ್ತವೆ' ಯಾಕೆಂದರೆ 'ಆತ್ಮವು ವಾಙ್ಮನಸಾತೀತವಾಗಿದೆ.' ಎಂದು ಉದ್ಘೋಷಿಸಿದೆ.

**ಕೇನೋಪನಿಷತ್ತು** (1-3, 4 ನೆಯ ಮಂತ್ರಗಳು) ಈ ಸಂಬಂಧದಲ್ಲಿ ಈ ಮುಂದಿನಂತೆ ಹೇಳುತ್ತದೆ.

**न विद्मो न विजानीमो यथैदनुशिष्यात् । अन्यदेव तद्विदितादथोऽविदितादधि । इति शुश्रुम पूर्वेषां येनस्तद्व्यचचक्षिरे ॥**

['ಆತ್ಮತತ್ತ್ವವನ್ನು ಹೇಗೆ ತಿಳಿಸಿ ಹೇಳಬೇಕೆಂಬುದು ನಮಗೆ ತಿಳಿಯದು. (ಯಾಕೆಂದರೆ) ಆತ್ಮತತ್ತ್ವವು ತಿಳಿದುಕೊಳ್ಳಲ್ಪಟ್ಟದ್ದಕ್ಕಿಂತ ಬೇರೆಯಾಗಿಯೇ ಇದೆ, ಮತ್ತು ತಿಳಿದುಕೊಳ್ಳಲ್ಪಡಲಾರದ್ದಕ್ಕಿಂತ ಕೂಡ ಬೇರೆಯಾಗಿಯೇ ಇದೆ ಎಂದು ಅದನ್ನು ನಮಗೆ ವಿವರಿಸಿದ ಹಿರಿಯರು (ಪೂರ್ವಾಚಾರ್ಯರುಗಳು) ಹೇಳಿದ್ದಾರೆ.']

ಇದರಿಂದ ಆತ್ಮಸಾಕ್ಷಾತ್ಕಾರವು ಮಾತುಗಳ ಮಾಧ್ಯಮದ ಮೂಲಕ ಆಗಲಾರದೆಂಬುದು ಸ್ಪಷ್ಟವಾಯಿತು. ಅಖಂಡಾಕಾರ-ವೃತ್ತ್ಯಾರೂಢಚೈತನ್ಯವು ಮಾತ್ರ ಅಜ್ಞಾನವನ್ನು ತೊಲಗಿಸಿ, ತನ್ನನ್ನು ತಾನೇ ಬೆಳಗುತ್ತ, ತನ್ನ ವೈಭವವನ್ನು ಮೆರೆಯಬಲ್ಲದು. ಈ ಮಾತನ್ನು **ಮಾನಸೋಲ್ಲಾಸ**ವು ಮುಂದಿನಂತೆ ಸ್ಪಷ್ಟಗೊಳಿಸಿದೆ.

**अविद्याख्यितरोधानव्यपाये परमेश्वरः ।**
**दक्षिणामूर्तिरूपोऽसौ स्वयमेव प्रकाशते ॥**

(ಮಾನಸೋಲ್ಲಾಸ IV-37)

ಮಾತಿಗೆ ಮೀರಿದ ಈ ಚರಮಾನುಭವವನ್ನು ಮಾತಿಗಿಂತಲೂ ಬಲಶಾಲಿಯಾದ ಮೌನದಿಂದ ಮಾತ್ರ ತಿಳಿಯಪಡಿಸಲು ಸಾಧ್ಯ.

**स्वात्मानं प्रकटीकरोति भजतां यो मुद्रया भद्रया** ಎಂಬ ದಕ್ಷಿಣಾಮೂರ್ತಿ ಸ್ತೋತ್ರದ ಚರಣದಲ್ಲಿ ಉಲ್ಲೇಖಿಸಲ್ಪಟ್ಟ ಚಿನ್ಮುದ್ರೆಯು ಇದನ್ನೇ ಸಮರ್ಥಿಸುತ್ತದೆ. ಅಲ್ಲದೆ, **मौनव्याख्याप्रकटितपरब्रह्मतत्त्वं युवानं** ಎಂಬ ಚರಣವು ಕೂಡ ಇದೇ ಭಾವವನ್ನೇ ಪ್ರಬಲಿಸುತ್ತದೆ. ಅಷ್ಟೇ ಅಲ್ಲ, ಶ್ರೀ ಸದಾಶಿವಬ್ರಹ್ಮೇಂದ್ರಪಾದರು, ಇದನ್ನೇ ಈ ಮುಂದಿನಂತೆ ಸ್ಪಷ್ಟಪಡಿಸಿದ್ದಾರೆ.

**अवचनचिन्मुद्राभ्यामद्वैतं बोधमात्रमात्मानम् ।**
**दर्शयति तत्र मानं पुस्तकभुजगाग्निभिर्महादेवः ॥**

[ಕೇವಲ ಬೋಧಮಾತ್ರಸ್ವರೂಪವಾದ ಅದ್ವೈತಾತ್ಮತತ್ತ್ವವನ್ನು, ಪರಂಜ್ಯೋತಿಃಸ್ವರೂಪನಾದ ದಕ್ಷಿಣಾಮೂರ್ತಿ ಶ್ರೀಮಹಾದೇವನು, ಮೌನ ಹಾಗೂ ಪರಮಮಂಗಲಕರವಾದ ಚಿನ್ಮುದ್ರೆಗಳಿಂದ ತೋರಿಸುತ್ತಿದ್ದಾನೆ. ಅದಕ್ಕೆ

ಅವನು ತನ್ನ ಕೈಗಳಲ್ಲಿ ಧರಿಸಿರುವ, ಪುಸ್ತಕ, ಸರ್ಪ, ಅಗ್ನಿಗಳೇ ಪ್ರಮಾಣವಾಗಿವೆ.]

ಈ ರೀತಿಯಾಗಿ ಶ್ರೀ ಪರಮೇಶ್ವರನೂ ಶ್ರೀ ಗುರುವೂ ಆದ, ಶ್ರೀದಕ್ಷಿಣಾಮೂರ್ತಿಯು ಉಪಾಸಕನನ್ನು ಒಳಗಿನಿಂದಲೂ ಹಾಗೂ ಹೊರಗಿನಿಂದಲೂ ಅನುಗ್ರಹಿಸುತ್ತಾನೆ; ಹೊರಗಿನಿಂದ ಜ್ಞಾನವನ್ನು ನೀಡುತ್ತ, ಹಾಗೂ ಒಳಗಿನಿಂದ ಮೌನವಾಗಿ ಪ್ರಕಾಶಿಸುತ್ತ. **अहं शिष्यवद्भामि** (ನಾನೇ ನನ್ನ ಶಿಷ್ಯನಂತೆ ಬೆಳಗಿ ತೋರುತ್ತಿರುವೆನು) ಎಂಬ ಶ್ರುತಿಯು (ತೇಜೋಬಿಂದೂಪನಿಷತ್ 3-18) ಘೋಷಿಸಿದಂತೆ, ತನ್ನ ಶಿಷ್ಯನ ಆತ್ಮನೂ ಸ್ವತಃ ತಾನೇ ಎಂಬ ಪರಮಸತ್ಯವು ಪೂಜ್ಯೇಷುಪೂಜ್ಯತಮನಾದ ಈ ಜಗದೊಡೆಯನಿಗೆ ಚೆನ್ನಾಗಿ ಗೊತ್ತು. ಆದ್ದರಿಂದಲೇ ತನ್ನ ಶಿಷ್ಯನಿಗೆ ತನ್ನ ದಿವ್ಯಸ್ವರೂಪವನ್ನು ಅಂತಃಸ್ಫುರಣದ ಮೂಲಕ ಅಭಿವ್ಯಕ್ತಗೊಳಿಸಲು ಸದಾ ಕಾತರನಾಗಿರುತ್ತಾನೆ.

ಈ ಭಾವವನ್ನೇ ಆಚಾರ್ಯ ಶ್ರೀ ಸುರೇಶ್ವರಪಾದರು ತಮ್ಮ **ನೈಷ್ಕರ್ಮ್ಯಸಿದ್ಧಿ** (3-28) ಯಲ್ಲಿ ಮುಂದಿನಂತೆ ಪ್ರಕಟಗೊಳಿಸಿದ್ದಾರೆ.

**यावद्यावन्निरस्याऽयं देहादीन् प्रत्यगञ्चति ।**

**तावत्तावत्तदर्थोऽपि त्वमर्थं प्रविविक्षति ॥**

[ಉಪಾಸಕನು ತನ್ನ ಶರೀರ ಮೊದಲುಗೊಂಡು ಅಂತಃಕರಣಾದಿ ಎಲ್ಲ ಅನಾತ್ಮಗಳನ್ನು (ಮಿಥ್ಯಾತ್ಮಗಳನ್ನು) ನಿರಾಕರಿಸುತ್ತ, ಅಂತರ್ಮುಖನಾಗಿ ಪ್ರತ್ಯಗಾತ್ಮದ ಕಡೆಗೆ ತಿರುತಿರುಗಿದಂತೆಲ್ಲ, ತತ್ ಪದಾರ್ಥದ ಲಕ್ಷ್ಯವು ತ್ವಂ ಪದಾರ್ಥದ ಲಕ್ಷ್ಯದಲ್ಲಿ ಲೀನವಾಗುವಿಕೆಯೂ ಅದರ ಸಮಕಾಲೀನವಾಗಿರುತ್ತದೆ.]

'ನೀನು ಭಗವಂತನೆಡೆಗೆ ಒಂದು ಹೆಜ್ಜೆಯನ್ನಿಟ್ಟರೆ, ಅವನು ನಿನ್ನೆಡೆಗೆ ನೂರು ಹೆಜ್ಜೆಗಳನ್ನಿಡುತ್ತಾನೆ' ಎಂಬ ಅಭಿಯುಕ್ತವಚನವು ಸರಿಯಾಗಿ ಇದೇ ಅರ್ಥವನ್ನೇ ಸೂಚಿಸುತ್ತದೆ.

ಇದೇ ಭಾವವು ಈ ಮುಂದಿನ ಮೂರು ಗೀತಾಶ್ಲೋಕಗಳಲ್ಲಿ ಸ್ಪಷ್ಟವಾಗಿದೆ.

**ये यथा मां प्रपद्यन्ते तांस्तथैव भजाम्यहम् ।** (ಗೀತಾ-IV-11)

**ये भजन्ति तु मां भक्त्या मयि ते तेषु चाप्यहम् ।** (ಗೀತಾ IX-29)

**मामेव ये प्रपद्यन्ते मायामेतां तरन्ति ते ।** (ಗೀತಾ 7-14)